# ಸಾರ್ವಜನಿಕ ಆವರಣ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1971

16.08.07ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 38ನೇ ಸಂಪುಟದ 1ನೇ ಸಂಚಿಕೆಯಲ್ಲಿ 211 ರಿಂದ 221ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ವಿಷಯಾನುಕ್ರಮಣಿಕೆ

**ಪ್ರಕರಣಗಳು :**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಎಸ್ಟೇಟ್ ಅಧಿಕಾರಿಗಳ ನೇಮಕ
3ಎ. ತಾತ್ಕಾಲಿಕ ಅಧಿಭೋಗದಿಂದ ಹೊರಹಾಕುವುದು
4. ಹೊರ ಹಾಕುವ ಆದೇಶದ ವಿರುದ್ಧ ಕಾರಣ ತೋರಿಸಲು ನೋಟೀಸನ್ನು ಹೊರಡಿಸುವುದು
5. ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು
5ಎ. ಅನಧಿಕೃತ ನಿರ್ಮಾಣಗಳು, ಇತ್ಯಾದಿಗಳನ್ನು ತೆಗೆದುಹಾಕುವ ಅಧಿಕಾರ
5ಬಿ. ಅನಧಿಕೃತ ನಿರ್ಮಾಣವನ್ನು ಕೆಡವಿ ಹಾಕಲು ಆದೇಶ
5ಸಿ. ಅನಧಿಕೃತ ನಿರ್ಮಾಣಗಳನ್ನು ಸೀಲು ಮಾಡುವ ಅಧಿಕಾರ
6. ಅನಧಿಕೃತ ಅಧಿಭೋಗದಾರರು ಸಾರ್ವಜನಿಕ ಆವರಣಗಳಲ್ಲಿ ಬಿಟ್ಟು ಹೋಗಿರುವ ಸ್ವತ್ತಿನ ವಿಲೇವಾರಿ
7. ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ ಬಾಡಿಗೆಯನ್ನು ಅಥವಾ ಹಾನಿ ಪರಿಹಾರವನ್ನು ಸಂದಾಯ ಮಾಡುವಂತೆ ಅಗತ್ಯಪಡಿಸುವ ಅಧಿಕಾರ
8. ಎಸ್ಟೇಟ್ ಅಧಿಕಾರಿಗಳ ಅಧಿಕಾರಗಳು
9. ಅಪೀಲುಗಳು
10. ಆದೇಶಗಳ ಅಂತಿಮತೆ
11. ಅಪರಾಧಗಳು ಮತ್ತು ದಂಡನೆ
11ಎ. 11ನೆಯ ಪ್ರಕರಣದ ಮೇರೆಗೆ ಅಪರಾಧಗಳು ಸಂಜ್ಞೇಯವಾಗಿರುವುದು
12. ಮಾಹಿತಿಯನ್ನು ಪಡೆಯುವ ಅಧಿಕಾರ
13. ವಾರಸುದಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳ ಹೊಣೆಗಾರಿಕೆ
14. ಭೂಕಂದಾಯದ ಬಾಕಿಯಂತೆ ಬಾಡಿಗೆ, ಇತ್ಯಾದಿಗಳನ್ನು ವಸೂಲು ಮಾಡುವುದು
15. ಅಧಿಕಾರ ವ್ಯಾಪ್ತಿಗೆ ಪ್ರತಿಕ್ಷೇಧ
16. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
17. ಅಧಿಕಾರಗಳ ಪ್ರತ್ಯಾಯೋಜನೆ
18. ನಿಯಮ ರಚನಾಧಿಕಾರ
19. ನಿರಸನ
20. ಸಿಂಧುಗೊಳಿಸುವಿಕೆ

## ಸಾರ್ವಜನಿಕ ಆವರಣ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1971

(1971ರ ಅಧಿನಿಯಮ ಸಂಖ್ಯೆ 40)

[23ನೇ ಆಗಸ್ಟ್, 1971]

ಸಾರ್ವಜನಿಕ ಆವರಣಗಳಿಂದ ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ ಬಗ್ಗೆ ಮತ್ತು ಕೆಲವು ಪ್ರಾಸಂಗಿಕ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೆರಡನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಆರಂಭ.**- (1) ಈ ಅಧಿನಿಯಮವನ್ನು ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1971 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಈ ಕೂಡಲೇ ಜಾರಿಗೆ ಬರತಕ್ಕ 11, 19 ಮತ್ತು 20ನೇ ಪ್ರಕರಣಗಳನ್ನು ಹೊರತುಪಡಿಸಿ, 1958ರ ಸೆಪ್ಟೆಂಬರ್ 16ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) [xxx]

(ಬಿ) "ಎಸ್ಟೇಟ್ ಅಧಿಕಾರಿ" ಎಂದರೆ 3ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಎಸ್ಟೇಟ್ ಅಧಿಕಾರಿ ಎಂದು ನೇಮಕ ಮಾಡುವ ಅಧಿಕಾರಿ;

(ಸಿ) "ಆವರಣಗಳು" ಎಂದರೆ ಯಾವುದೇ ಜಮೀನು ಅಥವಾ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಈ ಕೆಳಕಂಡವುಗಳನ್ನು ಒಳಗೊಂಡಿರುತ್ತದೆ,-

(i) ಅಂತಹ ಕಟ್ಟಡಕ್ಕೆ ಅಥವಾ ಕಟ್ಟಡದ ಭಾಗಕ್ಕೆ ಸೇರಿರುವ ತೋಟ, ನೆಲ ಮತ್ತು ಔಟ್-ಹೌಸ್‌ಗಳು ಯಾವುವಾದರೂ ಇದ್ದರೆ ಅವು; ಮತ್ತು

(ii) ಅಂತಹ ಕಟ್ಟಡಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅದರ ಹೆಚ್ಚಿನ ಸೌಕರ್ಯವನ್ನು ಅನುಭವಿಸಲು ಸೇರಿಸಿರುವ ಯಾವುದೇ ಜೋಡಣೆಗಳು;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) " ಸಾರ್ವಜನಿಕ ಆವರಣಗಳು" ಎಂದರೆ:-

(1) ಕೇಂದ್ರ ಸರ್ಕಾರಕ್ಕೆ ಸೇರಿದ ಅಥವಾ ಕೇಂದ್ರ ಸರ್ಕಾರವು ಗುತ್ತಿಗೆಯ ಮೇಲೆ ತೆಗೆದುಕೊಂಡ ಅಥವಾ ಅದರ ಪರವಾಗಿ ತೆಗೆದುಕೊಳ್ಳಲಾದ ಅಥವಾ ಕೇಂದ್ರ ಸರ್ಕಾರವು ಕಡ್ಡಾಯವಾಗಿ ಕೋರಿದ ಅಥವಾ ಅದರ ಪರವಾಗಿ ಕೋರಲಾದ ಯಾವುದೇ ಆವರಣಗಳು ಮತ್ತು ಅದರಲ್ಲಿ ಸಂಸತ್ತಿನ ಎರಡೂ ಸದನಗಳ ಪೈಕಿ ಯಾವುದೇ ಸದನದ ಸಚಿವಾಲಯದ ಸಿಬ್ಬಂದಿ ವರ್ಗದ ಯಾರೇ ಸದಸ್ಯನಿಗೆ ವಸತಿ ಸೌಲಭ್ಯ ಒದಗಿಸುವುದಕ್ಕಾಗಿ ಆ ಸರ್ಕಾರವು ಸಾರ್ವಜನಿಕರ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ತಿದ್ದುಪಡಿ ಅಧಿನಿಯಮ, 1980 (1980ರ 61)ರ ಪ್ರಾರಂಭಕ್ಕೆ ಮುಂಚೆಯಾಗಲೀ ಅಥವಾ ನಂತರವಾಗಲಿ ಆ ಸಚಿವಾಲಯದ ನಿಯಂತ್ರಣಕ್ಕೆ ಒಪ್ಪಿಸಿರುವಂತಹ ಆವರಣವೂ ಒಳಗೊಳ್ಳುತ್ತದೆ;

(2) ಕೆಳಕಂಡ ಸಂಸ್ಥೆಗಳಿಗೆ ಸೇರಿದ ಅಥವಾ ಅವು ಗುತ್ತಿಗೆಯ ಮೇಲೆ ತೆಗೆದುಕೊಂಡ ಅಥವಾ ಅವುಗಳ ಪರವಾಗಿ ತೆಗೆದುಕೊಳ್ಳಲಾದ ಯಾವುದೇ ಆವರಣಗಳು,-

(i) ಕಂಪನಿಗಳ ಅಧಿನಿಯಮ, 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಮತ್ತು ಕೇಂದ್ರ ಸರ್ಕಾರವು ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿರದಷ್ಟು ಸಂದಾಯ ಮಾಡಿದ ಷೇರು ಬಂಡವಾಳ ಹೊಂದಿರುವ ಯಾವುದೇ ಕಂಪನಿ ಅಥವಾ ಆ ಕಂಪನಿಯ (ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ) ಸಹಾಯಕ ಕಂಪನಿ;

(ii) ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಮತ್ತು ಕೇಂದ್ರ ಸರ್ಕಾರದ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ (ಕಂಪನಿಗಳ ಅಧಿನಿಯಮ, 1956 (1956ರ 1)ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಕಂಪನಿಯಲ್ಲದ ಅಥವಾ ಸ್ಥಳೀಯ ಪ್ರಾಧಿಕಾರವಾಗಿರದ) ಯಾವುದೇ ನಿಗಮ;

(iii) ಯಾವುದೇ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪಿತವಾದ ಅಥವಾ ನಿಗಮಿತವಾದ ಯಾವುದೇ ವಿಶ್ವವಿದ್ಯಾನಿಲಯ;

(iv) ತಂತ್ರ ವಿಜ್ಞಾನ ಸಂಸ್ಥೆಗಳ ಅಧಿನಿಯಮ, 1961 (1961ರ 59)ರ ಮೂಲಕ ನಿಗಮಿತವಾದ ಯಾವುದೇ ಸಂಸ್ಥೆ;

(v) ಮುಖ್ಯ ಬಂದರು ನ್ಯಾಸಗಳ ಅಧಿನಿಯಮ, 1963 (1963ರ 38)ರ ಅಡಿಯಲ್ಲಿ ರಚಿತವಾದ ಯಾವುದೇ ನ್ಯಾಸಧಾರಿಗಳ ಮಂಡಲಿ;

(vi) ಪಂಜಾಬು ಪುನಾರಚನೆ ಅಧಿನಿಯಮ, 1966 (1966ರ 31)ರ 79ನೇ ಪ್ರಕರಣದ ಮೇರೆಗೆ ರಚಿತವಾದ ಭಾಕ್ರಾ ವ್ಯವಸ್ಥಾಪಕ ಮಂಡಲಿ ಮತ್ತು ಆ ಅಧಿನಿಯಮದ 80ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಭಾಕ್ರಾ - ಭಿಯಾಸ್ ವ್ಯವಸ್ಥಾಪಕ ಮಂಡಲಿ ಎಂದು ಪುನರ್ ನಾಮಕರಣ ಮಾಡಿದ ಮೇಲೆ ಆ ಮಂಡಲಿ;

(vii) ರಾಷ್ಟ್ರೀಯ ರಾಜಧಾನಿ ದೆಹಲಿ ರಾಜ್ಯಕ್ಷೇತ್ರದಲ್ಲಿ ಅಥವಾ ಇತರ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಇರುವಂಥ ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರ;

(viii) ದಂಡು ಪ್ರದೇಶ ಅಧಿನಿಯಮ, 1924ರ ಮೇರೆಗೆ ರಚಿತವಾದ ಯಾವುದೇ ದಂಡುಪ್ರದೇಶ ಮಂಡಲಿ; ಮತ್ತು

(3) ರಾಷ್ಟ್ರೀಯ ರಾಜಧಾನಿ ದೆಹಲಿ ರಾಜ್ಯಕ್ಷೇತ್ರದ ಸಂಬಂಧದಲ್ಲಿ,-

(i) ದಿಲ್ಲಿ ಪುರಸಭಾ ನಿಗಮಕ್ಕೆ ಅಥವಾ ಯಾವುದೇ ಪುರಸಭಾ ಸಮಿತಿಗೆ ಅಥವಾ ಅಧಿಸೂಚಿತ ಪ್ರದೇಶ ಸಮಿತಿಗೆ ಸೇರಿದ ಆವರಣಗಳು;

(ii) ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಸ್ವಾಧೀನದಲ್ಲಿರಲಿ ಅಥವಾ ಗುತ್ತಿಗೆಗೆ ಕೊಟ್ಟಿರಲಿ, ಆ ಪ್ರಾಧಿಕಾರಕ್ಕೆ ಸೇರಿದ ಆವರಣಗಳು; ಮತ್ತು

(iii) ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರಕ್ಕೆ ಸೇರಿದ ಅಥವಾ ಅದು ಬಾಡಿಗೆಯ ಮೇಲೆ ತೆಗೆದುಕೊಂಡ ಅಥವಾ ಆ ಸರ್ಕಾರವು ಕಡ್ಡಾಯವಾಗಿ ಕೋರಿರುವ ಅಥವಾ ಅದರ ಪರವಾಗಿ ಕೋರಲಾಗಿರುವ ಯಾವುದೇ ಆವರಣಗಳು;

(ಎಫ್) ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ "ಬಾಡಿಗೆ" ಎಂದರೆ, ಆವರಣಗಳ ಅಧಿಕೃತ ಅಧಿಭೋಗದಲ್ಲಿರುವು ದಕ್ಕಾಗಿ ನಿಯತಕಾಲಿಕವಾಗಿ ಸಂದಾಯ ಮಾಡಬೇಕಾದ ಪ್ರತಿಫಲ, ಮತ್ತು ಕೇಂದ್ರ ಸರ್ಕಾರವು ಅಥವಾ ನಿಗಮಿತ ಪ್ರಾಧಿಕಾರವು ಸಂದಾಯ ಮಾಡಬೇಕಾಗಿರುವಲ್ಲಿ ಅದು ಕೆಳಕಂಡ ಚಾರ್ಜನ್ನು ಅಥವಾ ತೆರಿಗೆಯನ್ನು ಒಳಗೊಳ್ಳುತ್ತದೆ; ಎಂದರೆ,-

(i) ಆವರಣಗಳ ಅಧಿಭೋಗದ ಸಂಬಂಧದಲ್ಲಿನ ವಿದ್ಯುಚ್ಛಕ್ತಿ, ನೀರು ಅಥವಾ ಯಾವುದೇ ಇತರ ಸೇವೆಗಳಿಗಾಗಿ ಸಂದಾಯ ಮಾಡಬೇಕಾದ ಯಾವುದೇ ಚಾರ್ಜು;

(ii) ಆವರಣಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾಗಿರುವ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ತೆರಿಗೆ;

(ಎಫ್ಎ) ಈ ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಲಾದ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ "ಶಾಸನಬದ್ಧ ಪ್ರಾಧಿಕಾರ" ಎಂದರೆ,-

(i) ಸಂಸತ್ತಿನ ಯಾವುದೇ ಸದನದ ಸಚಿವಾಲಯದ ನಿಯಂತ್ರಣಕ್ಕೆ ಒಪ್ಪಿಸಲಾದ ಸಾರ್ವಜನಿಕ ಆವರಣಗಳ ವಿಷಯದಲ್ಲಿ ಸಂಸತ್ತಿನ ಸಂಬಂಧಪಟ್ಟ ಸದನದ ಸಚಿವಾಲಯ;

(ii) ಆ ಖಂಡದ (2)ನೇ ಉಪಖಂಡದ ಬಾಬು (i) ರಲ್ಲಿ ಉಲ್ಲೇಖಿಸಿರುವ ಸಾರ್ವಜನಿಕ ಆವರಣಗಳ ವಿಷಯದಲ್ಲಿ, ಆ ಉಪಖಂಡದಲ್ಲಿ ಉಲ್ಲೇಖಿಸಲಾದ ಕಂಪನಿ ಅಥವಾ ಸಂದರ್ಭಾನುಸಾರ ಸಹಾಯಕ ಕಂಪನಿ;

(iii) ಆ ಖಂಡದ (2)ನೇ ಉಪಖಂಡದ ಬಾಬು (ii) ರಲ್ಲಿ ಉಲ್ಲೇಖಿಸಲಾದ ಸಾರ್ವಜನಿಕ ಆವರಣಗಳ ವಿಷಯದಲ್ಲಿ ಆ ಉಪಖಂಡದಲ್ಲಿ ಉಲ್ಲೇಖಿಸಲಾದ ನಿಗಮ;

(iv) ಆ ಖಂಡದ (2)ನೇ ಉಪಖಂಡದ ಬಾಬುಗಳು (iii), (iv), (v), (vi) ಮತ್ತು (viii) ರಲ್ಲಿ ಅನುಕ್ರಮವಾಗಿ ಉಲ್ಲೇಖಿಸಲಾದ ಸಾರ್ವಜನಿಕ ಆವರಣಗಳ ವಿಷಯದಲ್ಲಿ, ಆ ಉಪಖಂಡಗಳಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾನಿಲಯ ಅಥವಾ ಸಂದರ್ಭಾನುಸಾರ ಸಂಸ್ಥೆ ಅಥವಾ ಮಂಡಲಿ; ಮತ್ತು

(v) ಆ ಖಂಡದ (3)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಸಾರ್ವಜನಿಕ ಆವರಣಗಳ ವಿಷಯದಲ್ಲಿ, ಆ ಉಪಖಂಡದಲ್ಲಿ ಉಲ್ಲೇಖಿಸಲಾದ ನಿಗಮ, ಅಥವಾ ಸಂದರ್ಭಾನುಸಾರವಾಗಿ ಸಮಿತಿ ಅಥವಾ ಪ್ರಾಧಿಕಾರ;

(ಎಫ್ಬಿ) ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ "ತಾತ್ಕಾಲಿಕ ಅಧಿಭೋಗ" ಎಂದರೆ, ಮೂವತ್ತು ದಿನಗಳಿಗಿಂತ ಕಡಿಮೆ ಇರುವ (ವಿಸ್ತರಿಸಿದ ಅವಧಿ ಯಾವುದಾದರೂ ಇದ್ದರೆ ಅದನ್ನೂ ಒಳಗೊಂಡು) ಒಟ್ಟು ಅವಧಿಗಾಗಿ ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ, ಒಂದು ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರದ ಪ್ರಾಧಿಕಾರ ಅಥವಾ ಶಾಸನಬದ್ಧ ಪ್ರಾಧಿಕಾರದ ಮೇರೆಗೆ ಮಾಡಿದ ಹಂಚಿಕೆಯ ಆದೇಶದ ಆಧಾರದ ಮೇಲೆ ಯಾರೇ ವ್ಯಕ್ತಿಯು ಪಡೆದ ಅಧಿಭೋಗ;

(ಜಿ) ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ "ಅನಧಿಕೃತ ಅಧಿಭೋಗ" ಎಂದರೆ ಸಾರ್ವಜನಿಕ ಆವರಣಗಳ ಅಧಿಭೋಗಕ್ಕೆ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಯು ಆ ಆವರಣಗಳ ಅಧಿಭೋಗದಲ್ಲಿರುವುದು ಮತ್ತು ಆ ಪದಾವಳಿಯು, ಯಾವ ಪ್ರಾಧಿಕಾರದ (ಮಂಜೂರಾತಿಯ ರೂಪದಲ್ಲಾಗಲಿ ಅಥವಾ ವರ್ಗಾವಣೆಯ ಇತರ ಯಾವುದೇ ರೂಪದಲ್ಲಾಗಲಿ) ಮೇರೆಗೆ ಯಾವ ವ್ಯಕ್ತಿಗೆ ಸಾರ್ವಜನಿಕ ಆವರಣಗಳನ್ನು ಅಧಿಭೋಗಿಸಲು ಅನುಮತಿಸಲಾಗಿತ್ತೋ ಆ ಪ್ರಾಧಿಕಾರವು ಮುಕ್ತಾಯಗೊಂಡ ಅಥವಾ ಯಾವುದೇ ಕಾರಣಕ್ಕಾಗಿ ಕೊನೆಗೊಂಡ ತರುವಾಯವೂ ಆ ವ್ಯಕ್ತಿಯು ಆ ಆವರಣಗಳ ಅಧಿಭೋಗದಲ್ಲಿ ಮುಂದುವರಿಯುವುದನ್ನು ಒಳಗೊಳ್ಳುತ್ತದೆ.

**3. ಎಸ್ಟೇಟ್ ಅಧಿಕಾರಿಗಳ ನೇಮಕ.-** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸರ್ಕಾರದ ಗೆಜೆಟೆಡ್ ಅಧಿಕಾರಿಗಳ ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರದ ಅಧಿಕಾರಿಗಳ ಪೈಕಿ, ತಾನು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ಎಸ್ಟೇಟ್ ಅಧಿಕಾರಿಗಳಾಗಿ ನೇಮಕ ಮಾಡಬಹುದು:

ಪರಂತು, ರಾಜ್ಯಸಭೆಯ ಸಭಾಪತಿಯೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ಹೊರತು, ರಾಜ್ಯಸಭಾ ಸಚಿವಾಲಯದ ಯಾರೇ ಅಧಿಕಾರಿಯನ್ನು ಹಾಗೆ ನೇಮಕ ಮಾಡತಕ್ಕದ್ದಲ್ಲ ಮತ್ತು ಲೋಕಸಭೆಯ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿದ ತರುವಾಯದ ಹೊರತು, ಲೋಕಸಭಾ ಸಚಿವಾಲಯದ ಯಾರೇ ಅಧಿಕಾರಿಯನ್ನು ಹಾಗೆ ನೇಮಕ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಶಾಸನಬದ್ಧ ಪ್ರಾಧಿಕಾರದ ಒಬ್ಬ ಅಧಿಕಾರಿಯನ್ನು, ಆ ಪ್ರಾಧಿಕಾರದ ನಿಯಂತ್ರಣದಲ್ಲಿರುವ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ ಮಾತ್ರ ಎಸ್ಟೇಟ್ ಅಧಿಕಾರಿ ಎಂಬುದಾಗಿ ನೇಮಕ ಮಾಡತಕ್ಕದ್ದು; ಮತ್ತು

(ಬಿ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಎಸ್ಟೇಟ್ ಅಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಅವರು ಯಾವ ಸ್ಥಳೀಯ ಪರಿಮಿತಿಗಳೊಳಗೆ ಅಥವಾ ಯಾವ ಸಾರ್ವಜನಿಕ ಆವರಣಗಳ ಪ್ರವರ್ಗಗಳ ಸಂಬಂಧದಲ್ಲಿ ಚಲಾಯಿಸತಕ್ಕದ್ದು ಎಂಬುದನ್ನು ಮತ್ತು ಅವರಿಗೆ ವಿಧಿಸಲಾಗಿರುವ ಕರ್ತವ್ಯಗಳನ್ನು ಅವರು ಯಾವ ಪರಿಮಿತಿಗಳೊಳಗೆ ಮತ್ತು ಪ್ರವರ್ಗಗಳ ಸಂಬಂಧದಲ್ಲಿ ನಿರ್ವಹಿಸತಕ್ಕದ್ದೆಂಬುದನ್ನು ನಿರ್ಧರಿಸಬಹುದು.

**3ಎ. ತಾತ್ಕಾಲಿಕ ಅಧಿಭೋಗದಿಂದ ಹೊರಹಾಕುವುದು.-** 4ನೇ ಪ್ರಕರಣ ಅಥವಾ 5ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಂದರ್ಭದ ಸನ್ನಿವೇಶಗಳಲ್ಲಿ ಎಸ್ಟೇಟ್ ಅಧಿಕಾರಿಯು, ಅವನು ಯುಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ, ಯಾವುವೇ ಆವರಣಗಳ ತಾತ್ಕಾಲಿಕ ಅಧಿಭೋಗಕ್ಕಾಗಿ ಅನುಮತಿಸಿದಂಥ ಯಾರೇ ವ್ಯಕ್ತಿಗಳು ಸದರಿ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವರೆಂದು ಮನವರಿಕೆಯಾದಾಗ ಅವನು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ತತ್‌ಕ್ಷಣ ಅಂಥ ವ್ಯಕ್ತಿಗಳನ್ನು ಹೊರಹಾಕುವ ಆದೇಶವನ್ನು ಮಾಡಬಹುದು ಮತ್ತು ಆ ತರುವಾಯ, ಹೊರಹಾಕುವ ಸದರಿ ಆದೇಶವನ್ನು ಅಂಥ ವ್ಯಕ್ತಿಗಳು ತಿರಸ್ಕರಿಸಿದರೆ ಅಥವಾ ಪಾಲಿಸಲು ವಿಫಲವಾದರೆ, ಅವನು, ಅವರನ್ನು ಆವರಣಗಳಿಂದ ಹೊರಹಾಕಬಹುದು ಮತ್ತು ಆವರಣದ ಸ್ವಾಧೀನವನ್ನು ತೆಗೆದುಕೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಬಲವನ್ನು ಬಳಸಬಹುದು.

**4. ಹೊರಹಾಕುವ ಆದೇಶದ ವಿರುದ್ಧ ಕಾರಣ ತೋರಿಸಲು ನೋಟೀಸನ್ನು ಹೊರಡಿಸುವುದು.-** (1) ಯಾರೇ ವ್ಯಕ್ತಿಗಳು, ಯಾವುವೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವರೆಂದು ಮತ್ತು ಅವರನ್ನು ಹೊರಹಾಕಬೇಕೆಂದು ಎಸ್ಟೇಟ್ ಅಧಿಕಾರಿಯು ಅಭಿಪ್ರಾಯಪಟ್ಟರೆ, ಆತನು, ಹೊರಹಾಕುವ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳನ್ನು ಕೇಳಿ ಈ ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಲಿಖಿತ ನೋಟೀಸನ್ನು ಹೊರಡಿಸತಕ್ಕದ್ದು.

(2) ಆ ನೋಟೀಸು,-

(ಎ) ಹೊರಹಾಕುವ ಆದೇಶವನ್ನು, ಯಾವ ಆಧಾರಗಳ ಮೇಲೆ ಮಾಡಬೇಕೆಂಬುದನ್ನು ಉದ್ದೇಶಿಸಲಾಗಿದೆ ಎಂಬುದನ್ನು ನಿರ್ದಿಷ್ಟಪಡಿಸಿರತಕ್ಕದ್ದು; ಮತ್ತು

(ಬಿ) ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ಅಂದರೆ, ಸಾರ್ವಜನಿಕ ಆವರಣಗಳ ಅಧಿಭೋಗದಲ್ಲಿರುವ ಅಥವಾ ಇರಬಹುದಾದಂತಹ ಅಥವಾ ಆ ಆವರಣಗಳಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವಂಥ ಎಲ್ಲ ವ್ಯಕ್ತಿಗಳು,-

(i) ನೋಟೀಸನ್ನು ಹೊರಡಿಸಿದ ಏಳು ದಿನಗಳಿಗಿಂತ ಮುಂಚಿತವಾಗಿಲ್ಲದ ದಿನಾಂಕದಂದು ಮತ್ತು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೂ

ಮೊದಲು ಉದ್ದೇಶಿತ ಆದೇಶದ ವಿರುದ್ಧ ಕಾರಣವೇನಾದರೂ ಇದ್ದರೆ, ಆ ಕಾರಣ ತೋರಿಸುವಂತೆ; ಮತ್ತು

(ii) ತೋರಿಸಿರುವ ಕಾರಣದ ಸಮರ್ಥನೆಯಾಗಿ, ಅವರು ಹಾಜರುಪಡಿಸಲು ಉದ್ದೇಶಿಸಿರುವ ಸಾಕ್ಷ್ಯದೊಡನೆ ವೈಯಕ್ತಿಕ ಸುನಾವಣೆಗೆ ಇಚ್ಛಿಸಿದರೆ ಆ ಸುನಾವಣೆಗೆ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದಂದು ಎಸ್ಟೇಟ್ ಅಧಿಕಾರಿಯ ಮುಂದೆ ಹಾಜರಾಗುವಂತೆ

- ಅವರನ್ನು ಅಗತ್ಯಪಡಿಸಬಹುದು.

(3) ಎಸ್ಟೇಟ್ ಅಧಿಕಾರಿಯು, ಸಾರ್ವಜನಿಕ ಆವರಣಗಳ ಹೊರಗಿನ ಬಾಗಿಲಿನ ಮೇಲೆ ಅಥವಾ ಇತರ ಕೆಲವು ಎದ್ದುಕಾಣುವ ಭಾಗಗಳಲ್ಲಿ ಮತ್ತು ನಿಯಮಿಸಬಹುದಾದಂಥ ಇತರ ಕೆಲವು ರೀತಿಯಲ್ಲಿ ಆ ನೋಟೀಸನ್ನು ಅಂಟಿಸುವಂತೆ ಮಾಡುವ ಮೂಲಕ ಆ ನೋಟೀಸನ್ನು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ಕ್ರಮಬದ್ಧವಾಗಿ ನೀಡಲಾಗಿದೆಯೆಂದು ಭಾವಿಸತಕ್ಕದ್ದು.

(4) [xxxx]

**5. ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು.**- (1) 4ನೇ ಪ್ರಕರಣದ ಮೇರೆಗಿನ ನೋಟೀಸಿಗನುಸಾರವಾಗಿ ಯಾರೇ ವ್ಯಕ್ತಿಯು, ಯಾವುದೇ ಕಾರಣವನ್ನು ತೋರಿಸಿದ್ದರೆ ಅದನ್ನು ಪರಿಶೀಲಿಸಿದ ತರುವಾಯ, ಮತ್ತು 4ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನೀಡಲಾದ ವೈಯಕ್ತಿಕ ಸುನಾವಣೆ ಇದ್ದರೆ ಆ ಸುನಾವಣೆಯ ತರುವಾಯ, ಸಾರ್ವಜನಿಕ ಆವರಣಗಳು ಅನಧಿಕೃತ ಅಧಿಭೋಗದಲ್ಲಿರುವುದೆಂದು ಎಸ್ಟೇಟ್ ಅಧಿಕಾರಿಗೆ ಮನವರಿಕೆಯಾದರೆ, ಆ ಎಸ್ಟೇಟ್ ಅಧಿಕಾರಿಯು ಹೊರಹಾಕುವ ಆದೇಶದಲ್ಲಿ ಕಾರಣಗಳನ್ನು ನಮೂದಿಸಿ ಸಾರ್ವಜನಿಕ ಆವರಣಗಳ ಎಲ್ಲ ಅಥವಾ ಅದರ ಯಾವುದೇ ಭಾಗಗಳ ಅಧಿಭೋಗದಲ್ಲಿರಬಹುದಾದಂತಹ ಎಲ್ಲ ವ್ಯಕ್ತಿಗಳು ನಿರ್ದಿಷ್ಟಪಡಿಸಿರಬಹುದಾದಂತಹ ದಿನಾಂಕದಂದು ಸಾರ್ವಜನಿಕ ಆವರಣಗಳನ್ನು ಖಾಲಿ ಮಾಡತಕ್ಕದ್ದೆಂದು ನಿರ್ದೇಶಿಸಿ ಅಂಥ ಆದೇಶವನ್ನು ಮಾಡಬಹುದು ಮತ್ತು ಆ ಆದೇಶದ ಒಂದು ಪ್ರತಿಯನ್ನು ಸಾರ್ವಜನಿಕ ಆವರಣಗಳ ಹೊರಬಾಗಿಲಿನಲ್ಲಿ ಅಥವಾ ಇತರ ಎದ್ದುಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(2) ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಅಥವಾ (1)ನೇ ಉಪಪ್ರಕರಣದ ಮೇರೆಗೆ ಅದರ ಪ್ರಕಟಣೆಯಾದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಇವೆರಡರಲ್ಲಿ ಯಾವುದು ನಂತರದ್ದೋ ಅದರ ಒಳಗಾಗಿ, ಹೊರಹಾಕುವ ಆ ಆದೇಶವನ್ನು ಪಾಲಿಸಲು ಯಾರೇ ವ್ಯಕ್ತಿಯು ನಿರಾಕರಿಸಿದರೆ ಅಥವಾ ತಪ್ಪಿದರೆ, ಎಸ್ಟೇಟ್ ಅಧಿಕಾರಿಯು ಅಥವಾ ತನ್ನ ಪರವಾಗಿ ಯುಕ್ತವಾಗಿ ಅಧಿಕೃತಗೊಳಿಸಿದ ಇತರ ಯಾರೇ ಅಧಿಕಾರಿಯು, ಹಾಗೆ ನಿರ್ದಿಷ್ಟಪಡಿಸಲಾದ ದಿನಾಂಕದ ತರುವಾಯ ಅಥವಾ ಮೇಲೆ ಹೇಳಿದ ಅವಧಿಯು ಮುಗಿದ ನಂತರ, ಇವೆರಡರಲ್ಲಿ ಯಾವುದು ತರುವಾಯವೋ ಆ ದಿನಾಂಕದಂದು, ಸಾರ್ವಜನಿಕ ಆವರಣಗಳಿಂದ ಅಂಥ ವ್ಯಕ್ತಿಯನ್ನು ಹೊರ ಹಾಕಿ ಆವರಣಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕೆ ಅಗತ್ಯವೆನಿಸಬಹುದಾದಂತಹ ಬಲವನ್ನು ಬಳಸಿಕೊಳ್ಳಬಹುದು.

**5ಎ. ಅನಧಿಕೃತ ನಿರ್ಮಾಣಗಳು, ಇತ್ಯಾದಿಗಳನ್ನು ತೆಗೆದುಹಾಕುವ ಅಧಿಕಾರ.**- (1) ಯಾರೇ ವ್ಯಕ್ತಿಯು ಯಾವ ಪ್ರಾಧಿಕಾರದ ಮೇರೆಗೆ (ಮಂಜೂರಾತಿಯ ಮೂಲಕವಾಗಲೀ ಅಥವಾ ಇತರ ಯಾವುದೇ ರೀತಿಯ ವರ್ಗಾವಣೆಯ ಮೂಲಕವಾಗಲಿ) ಪ್ರಾಧಿಕಾರದ ಅಂಥ ಸಾರ್ವಜನಿಕ ಆವರಣಗಳನ್ನು ಅಧಿಭೋಗಿಸಲು ತನಗೆ ಅನುಮತಿಸಲಾಗಿದೆಯೋ ಅಂಥ ಪ್ರಾಧಿಕಾರದ ಅನುಸಾರವಾಗಿ ಹೊರತು, ಅಂಥ ಯಾವುವೇ ಆವರಣಗಳ ಮೇಲೆ ಅಥವಾ ಎದುರು ಅಥವಾ ಅದರ ಮುಂದೆ,-

(ಎ) ಯಾವುದೇ ಕಟ್ಟಡವನ್ನು ಅಥವಾ ಯಾವುದೇ ಚರ ಅಥವಾ ಸ್ಥಿರ ರಚನೆಯನ್ನು ಅಥವಾ ಜೋಡಣೆಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಇರಿಸತಕ್ಕದ್ದಲ್ಲ ಅಥವಾ ಕಟ್ಟತಕ್ಕದ್ದಲ್ಲ;

(ಬಿ) ಯಾವುದೇ ಸರಕುಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ;

(ಸಿ) ಯಾವುದೇ ಜಾನುವಾರನ್ನು ಅಥವಾ ಇತರ ಪ್ರಾಣಿಗಳನ್ನು ತರತಕ್ಕದ್ದಲ್ಲ ಅಥವಾ ಇರಿಸತಕ್ಕದ್ದಲ್ಲ.

(2) (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಾರ್ವಜನಿಕ ಆವರಣಗಳಲ್ಲಿ ಯಾವುದೇ ಕಟ್ಟಡವನ್ನು ಅಥವಾ ಇತರ ಸ್ಥಿರ ರಚನೆಯನ್ನು ಅಥವಾ ಜೋಡಣೆಯನ್ನು ನಿರ್ಮಿಸಿರುವಲ್ಲಿ, ಇರಿಸಿರುವಲ್ಲಿ ಅಥವಾ ಕಟ್ಟಿರುವಲ್ಲಿ, ಎಸ್ಟೇಟ್ ಅಧಿಕಾರಿಯು, ಅಂಥ ಕಟ್ಟಡವನ್ನು ಅಥವಾ ಇತರ ರಚನೆಯನ್ನು ಅಥವಾ ಜೋಡಣೆಯನ್ನು ನಿರ್ಮಿಸಿದಂತಹ ವ್ಯಕ್ತಿಗೆ, ನೋಟೀಸನ್ನು ಜಾರಿಗೊಳಿಸಿ ಆ ನೋಟೀಸಿನಲ್ಲಿ ಅವನು ನಿರ್ದಿಷ್ಟಪಡಿಸಿರಬಹುದಾದಂತಹ ಏಳು ದಿನಗಳಿಗೆ ಕಡಿಮೆ ಇಲ್ಲದಂಥ ಅವಧಿಯೊಳಗೆ, ಆ ಸಾರ್ವಜನಿಕ ಆವರಣಗಳಿಂದ ಅಂತಹ ಕಟ್ಟಡವನ್ನು ಅಥವಾ ಇತರ ನಿರ್ಮಾಣವನ್ನು ಅಥವಾ ಜೋಡಣೆಯನ್ನು ತೆಗೆದುಹಾಕುವುದಕ್ಕೆ ಅಥವಾ ತೆಗೆದುಹಾಕದೇ ಇರುವುದಕ್ಕೆ ಕಾರಣವನ್ನು ತೋರಿಸಲು ಅವನನ್ನು ಅಗತ್ಯಪಡಿಸಬಹುದು ಮತ್ತು ಅಂಥ ವ್ಯಕ್ತಿಯು ಕಾರಣವನ್ನು ತೋರಿಸಲು ತಪ್ಪಿದರೆ ಅಥವಾ ನಿರಾಕರಿಸಿದರೆ ಅಥವಾ ಸಾರ್ವಜನಿಕ ಆವರಣಗಳಿಂದ ಅಂತಹ ಕಟ್ಟಡವನ್ನು ಅಥವಾ ಇತರ ನಿರ್ಮಾಣವನ್ನು ಅಥವಾ ಜೋಡಣೆಯನ್ನು ತೆಗೆದುಹಾಕಲು ತಪ್ಪಿದರೆ, ನಿರಾಕರಿಸಿದರೆ ಅಥವಾ ತೋರಿಸಲಾಗಿರುವ ಕಾರಣಗಳು ಸಾಕಷ್ಟಿಲ್ಲವೆಂದು ಎಸ್ಟೇಟ್ ಅಧಿಕಾರಿಯು ಅಭಿಪ್ರಾಯಪಟ್ಟರೆ, ಆ ಎಸ್ಟೇಟ್ ಅಧಿಕಾರಿಯು, ಆದೇಶದ ಮೂಲಕ ಸಾರ್ವಜನಿಕ ಆವರಣಗಳಿಂದ ಆ ಕಟ್ಟಡವನ್ನು ಅಥವಾ ಇತರ ರಚನೆಯನ್ನು ಅಥವಾ ಜೋಡಣೆಯನ್ನು ತೆಗೆದುಹಾಕಬಹುದು ಅಥವಾ ತೆಗೆದುಹಾಕುವಂತೆ ಮಾಡಬಹುದು ಮತ್ತು ಹಾಗೆ ತೆಗೆದುಹಾಕಲು ಆದ ವೆಚ್ಚವನ್ನು ಆ ವ್ಯಕ್ತಿಯಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

(3) ಯಾರೇ ವ್ಯಕ್ತಿಯು, (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸಾರ್ವಜನಿಕ ಆವರಣಗಳಲ್ಲಿ ಯಾವುದೇ ಚರ ರಚನೆಯನ್ನು ಅಥವಾ ಜೋಡಣೆಯನ್ನು ನಿರ್ಮಿಸಿದರೆ, ಇರಿಸಿದರೆ ಅಥವಾ ಕಟ್ಟಿದರೆ ಅಥವಾ ಯಾವುದೇ ವಸ್ತುವನ್ನು ಪ್ರದರ್ಶಿಸಿದರೆ ಅಥವಾ ಹರಡಿದರೆ ಅಥವಾ ಯಾವುದೇ ಜಾನುವಾರನ್ನು ಅಥವಾ ಇತರ ಪ್ರಾಣಿಗಳನ್ನು ಹೊಂದಿರುವಲ್ಲಿ ಅವುಗಳನ್ನು ಅಲ್ಲಿಗೆ ತಂದರೆ ಅಥವಾ ಅಲ್ಲಿ ಇರಿಸಿದರೆ, ಎಸ್ಟೇಟ್ ಅಧಿಕಾರಿಯು, ಸಾರ್ವಜನಿಕ ಆವರಣಗಳಿಂದ ಅಂತಹ ರಚನೆ, ಜೋಡಣೆ, ಸರಕು, ಜಾನುವಾರು ಅಥವಾ ಸಂದರ್ಭಾನುಸಾರ, ಇತರ ಪ್ರಾಣಿಗಳನ್ನು ನೋಟೀಸು ನೀಡದೆಯೇ ಹೊರ ಹಾಕಬಹುದು ಅಥವಾ ಹೊರಹಾಕುವಂತೆ ಮಾಡಬಹುದು ಮತ್ತು ಹಾಗೆ ತೆಗೆದುಹಾಕಲು ಆದ ವೆಚ್ಚವನ್ನು ಅಂಥ ವ್ಯಕ್ತಿಯಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

**5ಬಿ. ಅನಧಿಕೃತ ನಿರ್ಮಾಣವನ್ನು ಕೆಡವಿ ಹಾಕಲು ಆದೇಶ.-** (1) ಒಂದು ಪ್ರಾಧಿಕಾರದ ಮೇರೆಗೆ (ಮಂಜೂರಾತಿಯ ರೂಪದಲ್ಲಾಗಲಿ ಅಥವಾ ವರ್ಗಾವಣೆಯ ಇತರ ಯಾವುದೇ ರೂಪದಲ್ಲಾಗಿರಲಿ) ಇರುವ ಯಾವುದೇ ಸಾರ್ವಜನಿಕ ಆವರಣಗಳ ಅಧಿಭೋಗದಲ್ಲಿರುವ ಯಾರೇ ವ್ಯಕ್ತಿಯು ಅಂಥ ಯಾವುದೇ ಆವರಣದಲ್ಲಿ ಯಾವುದೇ ಕಟ್ಟಡದ ರಚನೆಯನ್ನು ಅಥವಾ ಯಾವುದೇ ಕಾಮಗಾರಿಯ ನಿರ್ವಹಣೆಯನ್ನು ಪ್ರಾರಂಭಿಸಿರುವಲ್ಲಿ ಅಥವಾ ಕಾರ್ಯಗತಗೊಳಿಸುತ್ತಿರುವಲ್ಲಿ ಅಥವಾ ಪೂರ್ಣಗೊಳಿಸಿರುವಲ್ಲಿ ಮತ್ತು ಅಂತಹ ಕಟ್ಟಡದ ರಚನೆಯನ್ನು ಅಥವಾ ಕಾಮಗಾರಿಯ ನಿರ್ವಹಣೆಯನ್ನು ಪ್ರಾಧಿಕಾರವನ್ನು ಉಲ್ಲಂಘಿಸಿ ಮಾಡಿರುವಲ್ಲಿ, ಅಥವಾ ಹಾಗೆ ಮಾಡಲು ಅಂಥ ಪ್ರಾಧಿಕಾರವು ಅಧಿಕೃತಗೊಳಿಸಿರುವಲ್ಲಿ ಆಗ ಎಸ್ಟೇಟ್ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ಅಥವಾ ಮೇಲೆ ಹೇಳಿದ ಪ್ರಾಧಿಕಾರದ ನಿಬಂಧನೆಗಳಿಗನುಸಾರ ತೆಗೆದುಕೊಳ್ಳಬಹುದಾದ ಯಾವುದೇ ಇತರ ಕ್ರಮದ ಜೊತೆಗೆ ಕಾರಣಗಳನ್ನು ದಾಖಲು ಮಾಡಿ ಒಂದು ಆದೇಶ ಹೊರಡಿಸತಕ್ಕದ್ದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದಂತಹ ಅವಧಿಯೊಳಗೆ, ಯಾರ ಸೂಚನೆಯ ಮೇರೆಗೆ ಕಟ್ಟಡದ ರಚನೆಯನ್ನು ಅಥವಾ ಕಾಮಗಾರಿಯ ನಿರ್ವಹಣೆಯನ್ನು ಪ್ರಾರಂಭಿಸಲಾಗಿದೆಯೋ ಅಥವಾ ಕಾರ್ಯಗತಗೊಳಿಸಲಾಗುತ್ತಿದೆಯೋ ಅಥವಾ ಪೂರ್ಣಗೊಳಿಸಲಾಗಿದೆಯೋ ಅಂಥ ವ್ಯಕ್ತಿಯು ಅಂಥ ಕಟ್ಟಡದ ರಚನೆಯನ್ನು ಅಥವಾ ಕಾಮಗಾರಿಯನ್ನು ಕೆಡವಿ ಹಾಕತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಅಂತಹ ಆದೇಶವನ್ನು ಏಕೆ ಮಾಡಕೂಡದು ಎಂಬ ಬಗ್ಗೆ ಕಾರಣವನ್ನು ತೋರಿಸುವಂತೆ ನಿಯಮಿಸಲಾದ ರೀತಿಯಲ್ಲಿ ಜಾರಿಗೊಳಿಸಿದ ಏಳು ದಿನಗಳಿಗೆ ಕಡಿಮೆಯಲ್ಲದ ನೋಟೀಸಿನ ಮೂಲಕ ಯುಕ್ತ ಅವಕಾಶವನ್ನು ಸಂಬಂಧಪಟ್ಟ ವ್ಯಕ್ತಿಗೆ ಕೊಟ್ಟ ಹೊರತು, ಈ ಉಪಪ್ರಕರಣದ ಮೇರೆಗೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಪೂರ್ಣಗೊಳಿಸದಿರುವಲ್ಲಿ, ಎಸ್ಟೇಟ್ ಅಧಿಕಾರಿಯು, ಈ ಆದೇಶದ ಮೂಲಕ ಅಥವಾ (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ನೋಟೀಸನ್ನು ಹೊರಡಿಸುವ ಸಮಯದಲ್ಲಿ ಅಥವಾ ಯಾವುದೇ ಇತರ ಸಮಯದಲ್ಲಿ ಮಾಡಲಾದ ಪ್ರತ್ಯೇಕ ಆದೇಶದ ಮೂಲಕ, ಯಾರ ಸೂಚನೆಯ ಮೇರೆಗೆ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಪ್ರಾರಂಭಿಸಲಾಯಿತೋ ಅಥವಾ ಅದನ್ನು ಕಾರ್ಯಗತಗೊಳಿಸಲಾಗುತ್ತಿದೆಯೋ ಆ ವ್ಯಕ್ತಿಗೆ, ಕೆಡವಿ ಹಾಕುವ ಆದೇಶವನ್ನು ಮಾಡಿದ್ದರೆ ಆ ಆದೇಶದ ವಿರುದ್ಧ 9ನೆಯ ಪ್ರಕರಣದ ಮೇರೆಗೆ ಅಪೀಲು ಸಲ್ಲಿಸಬಹುದಾದ ಅವಧಿಯು ಮುಗಿಯುವವರೆಗೆ, ಆ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ನಿಲ್ಲಿಸುವಂತೆ ನಿರ್ದೇಶಿಸಬಹುದು.

(3) (1)ನೆಯ ಉಪಪ್ರಕರಣ ಅಥವಾ ಸಂದರ್ಭಾನುಸಾರ (2)ನೆಯ ಉಪಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಸಾರ್ವಜನಿಕ ಆವರಣಗಳ ಹೊರ ಬಾಗಿಲಿನ ಮೇಲೆ ಅಥವಾ ಯಾವುದೇ ಇತರ ಎದ್ದುಕಾಣುವ ಭಾಗಗಳ ಮೇಲೆ ಅಂಟಿಸುವ ವ್ಯವಸ್ಥೆ ಮಾಡತಕ್ಕದ್ದು.

(4) (1)ನೆಯ ಉಪಪ್ರಕರಣದ ಮೇರೆಗೆ ಎಸ್ಟೇಟ್ ಅಧಿಕಾರಿಯು ಮಾಡಿದ ಕೆಡವಿ ಹಾಕುವ ಆದೇಶಕ್ಕೆ ವಿರುದ್ಧವಾಗಿ ಯಾವುದೇ ಅಪೀಲನ್ನು ಸಲ್ಲಿಸದಿರುವಲ್ಲಿ ಅಥವಾ ಆ ಉಪಪ್ರಕರಣದ ಮೇರೆಗೆ ಎಸ್ಟೇಟ್ ಅಧಿಕಾರಿಯು ಮಾಡಿದ ಕೆಡವಿ ಹಾಕುವ ಆದೇಶವನ್ನು, ವ್ಯತ್ಯಾಸಗಳೊಂದಿಗೆ ಅಥವಾ ವ್ಯತ್ಯಾಸಗಳಿಲ್ಲದೆಯೇ ಅಪೀಲಿನಲ್ಲಿ ಸ್ಥಿರೀಕರಿಸಿರುವಲ್ಲಿ ಯಾವ ವ್ಯಕ್ತಿಯ ವಿರುದ್ಧ ಆ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಸಂದರ್ಭಾನುಸಾರ ಅಪೀಲಿನಲ್ಲಿ, ಅಪೀಲು ಅಧಿಕಾರಿಯು ನಿಗದಿಪಡಿಸಿದ ಅವಧಿ ಯಾವುದಾದರೂ ಇದ್ದರೆ ಆ ಅವಧಿಯೊಳಗೆ ಆ ಆದೇಶವನ್ನು ಪಾಲಿಸತಕ್ಕದ್ದು ಮತ್ತು ಅಂತಹ ಅವಧಿಯೊಳಗೆ ಆ ವ್ಯಕ್ತಿಯು ಆದೇಶವನ್ನು ಪಾಲಿಸಲು ತಪ್ಪಿದರೆ, ಎಸ್ಟೇಟ್ ಅಧಿಕಾರಿಯು ಅಥವಾ ಈ ಸಂಬಂಧದಲ್ಲಿ ಎಸ್ಟೇಟ್ ಅಧಿಕಾರಿಯು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು ಆ ಆದೇಶವು ಯಾವ ನಿರ್ಮಾಣ ಅಥವಾ ಕಾಮಗಾರಿಗೆ ಸಂಬಂಧಪಟ್ಟಿರುವುದೋ ಅದನ್ನು ಕೆಡವಿ ಹಾಕುವಂತೆ ಮಾಡಬಹುದು.

(5) ಯಾವುದೇ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಕೆಡವಿ ಹಾಕಿರುವಲ್ಲಿ, ಎಸ್ಟೇಟ್ ಅಧಿಕಾರಿಯು, ಒಂದು ಆದೇಶವನ್ನು ಹೊರಡಿಸಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದಂತಹ ಅವಧಿಯೊಳಗೆ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಕಂತುಗಳಲ್ಲಿ ಹಾಗೆ ಕೆಡವಿ ಹಾಕುವುದಕ್ಕೆ ತಗುಲಿದ ವೆಚ್ಚವನ್ನು ಸಂಬಂಧಪಟ್ಟ ವ್ಯಕ್ತಿಯು ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು.

**5ಸಿ. ಅನಧಿಕೃತ ನಿರ್ಮಾಣಗಳನ್ನು ಸೀಲು ಮಾಡುವ ಅಧಿಕಾರ.**- (1) 5ಬಿ ಪ್ರಕರಣದ ಮೇರೆಗೆ ಕೆಡವಿ ಹಾಕುವ ಆದೇಶವನ್ನು ಮಾಡುವುದಕ್ಕೆ ಮುಂಚೆ ಅಥವಾ ಆ ತರುವಾಯ ಯಾವುದೇ ಸಮಯದಲ್ಲಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅಥವಾ ಅಂಥ ನಿರ್ಮಾಣದ ಅಥವಾ ಕಾಮಗಾರಿಯ ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತ ಯಾವುದೇ ವಿವಾದವನ್ನು ತಡೆಗಟ್ಟುವುದಕ್ಕಾಗಿ ಅಂಥ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಅಥವಾ ಯಾವ ಸಾರ್ವಜನಿಕ ಆವರಣಗಳಲ್ಲಿ ಅಂಥ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೋ ಆ ಆವರಣವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸೀಲು ಮಾಡುವ ಆದೇಶವನ್ನು ಮಾಡುವುದು ಎಸ್ಟೇಟ್ ಅಧಿಕಾರಿಗೆ ಕಾನೂನುಸಮ್ಮತವಾಗಿರತಕ್ಕದ್ದು.

(2) ಯಾವುದೇ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಅಥವಾ ಯಾವುದೇ ನಿರ್ಮಾಣ ಅಥವಾ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗುತ್ತಿರುವ ಯಾವುದೇ ಆವರಣಗಳನ್ನು ಸೀಲು ಮಾಡುವ ಅಥವಾ ಸೀಲು ಮಾಡಿರುವ ಸಂದರ್ಭದಲ್ಲಿ ಎಸ್ಟೇಟ್ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ನಿರ್ಮಾಣವನ್ನು ಅಥವಾ ಕಾಮಗಾರಿಯನ್ನು ಕೆಡವಿ ಹಾಕುವ ಉದ್ದೇಶಕ್ಕಾಗಿ ಅಂಥ ಸೀಲು ಮಾಡಿರುವುದನ್ನು ತೆಗೆದುಹಾಕುವಂತೆ ಆದೇಶ ಮಾಡಬಹುದು.

(3) ಯಾರೇ ವ್ಯಕ್ತಿಯು, ಹಾಗೆ ಸೀಲು ಮಾಡಿರುವುದನ್ನು,-

(ಎ) (2)ನೆಯ ಉಪಪ್ರಕರಣದ ಮೇರೆಗೆ ಎಸ್ಟೇಟ್ ಅಧಿಕಾರಿಯು ಮಾಡಿರುವ ಆದೇಶದ ಮೇರೆಗೆ ಹೊರತು; ಅಥವಾ

(ಬಿ) ಈ ಅಧಿನಿಯಮದ ಮೇರೆಗಿನ ಅಪೀಲಿನಲ್ಲಿ ಅಪೀಲು ಅಧಿಕಾರಿಯು ಮಾಡಿರುವ ಆದೇಶದ ಮೇರೆಗೆ ಹೊರತು

- ತೆಗೆದು ಹಾಕತಕ್ಕದ್ದಲ್ಲ.

**6. ಅನಧಿಕೃತ ಅಧಿಭೋಗದಾರರು ಸಾರ್ವಜನಿಕ ಆವರಣಗಳಲ್ಲಿ ಬಿಟ್ಟುಹೋಗಿರುವ ಸ್ವತ್ತಿನ ವಿಲೇವಾರಿ.**- (1) 5ನೆಯ ಪ್ರಕರಣದ ಮೇರೆಗೆ, ಯಾವುದೇ ಸಾರ್ವಜನಿಕ ಆವರಣಗಳಿಂದ ಯಾರೇ ವ್ಯಕ್ತಿಗಳನ್ನು ಹೊರಹಾಕಿರುವಲ್ಲಿ, ಅಥವಾ 5ಬಿ ಪ್ರಕರಣದ ಮೇರೆಗೆ ಯಾವುದೇ ಕಟ್ಟಡ ಅಥವಾ ಇತರ ಕಾಮಗಾರಿಯನ್ನು ಕೆಡವಿ ಹಾಕಿದ್ದರೆ, ಎಸ್ಟೇಟ್ ಅಧಿಕಾರಿಯು, ಯಾವ ವ್ಯಕ್ತಿಯಿಂದ ಸಾರ್ವಜನಿಕ ಆವರಣಗಳ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆಯೋ ಅಂಥ ವ್ಯಕ್ತಿಗಳಿಗೆ ಹದಿನಾಲ್ಕು ದಿನಗಳ ನೋಟೀಸನ್ನು ನೀಡಿದ ತರುವಾಯ ಮತ್ತು ಆ ಪ್ರದೇಶದಲ್ಲಿ ಪ್ರಸಾರವುಳ್ಳ ಕನಿಷ್ಠ ಒಂದು ವೃತ್ತಪತ್ರಿಕೆಯಲ್ಲಿ ಆ ನೋಟೀಸನ್ನು ಪ್ರಕಟಿಸಿದ ನಂತರ, ಅಂಥ ಆವರಣಗಳಲ್ಲಿ ಉಳಿದಿರುವ ಯಾವುದೇ ಸ್ವತ್ತನ್ನು ತೆಗೆದು ಹಾಕಬಹುದು ಅಥವಾ ತೆಗೆದು ಹಾಕಿಸಬಹುದು ಅಥವಾ ಸಾರ್ವಜನಿಕ ಹರಾಜಿನ ಮೂಲಕ ವಿಲೇ ಮಾಡಬಹುದು.

(1ಎ) 5ಎ ಪ್ರಕರಣದ ಮೇರೆಗೆ ಯಾವುದೇ ಸಾರ್ವಜನಿಕ ಆವರಣಗಳಿಂದ ಯಾವುವೇ ಸರಕುಗಳನ್ನು, ಸಾಮಗ್ರಿಗಳನ್ನು, ಜಾನುವಾರನ್ನು ಅಥವಾ ಇತರ ಪ್ರಾಣಿಯನ್ನು ಸ್ಥಳಾಂತರಿಸಿರುವಲ್ಲಿ, ಎಸ್ಟೇಟ್ ಅಧಿಕಾರಿಯು, ಅಂತಹ ಸರಕುಗಳ, ಸಾಮಗ್ರಿಗಳ, ಜಾನುವಾರಿನ ಅಥವಾ ಇತರ ಪ್ರಾಣಿಯ ಒಡೆತನವನ್ನು ಹೊಂದಿರುವ ವ್ಯಕ್ತಿಗಳಿಗೆ ಹದಿನಾಲ್ಕು ದಿನಗಳ ನೋಟೀಸನ್ನು ನೀಡಿದ ತರುವಾಯ ಮತ್ತು ಆ ಪ್ರದೇಶದಲ್ಲಿ ಪ್ರಸಾರವುಳ್ಳ ಕನಿಷ್ಠ ಒಂದು ವೃತ್ತಪತ್ರಿಕೆಯಲ್ಲಿ ನೋಟೀಸನ್ನು ಪ್ರಕಟಿಸಿದ ತರುವಾಯ, ಅಂತಹ ಸರಕುಗಳು, ಸಾಮಗ್ರಿಗಳು, ಜಾನುವಾರು ಅಥವಾ ಇತರ ಪ್ರಾಣಿಯನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇ ಮಾಡಬಹುದು.

(1ಬಿ) (1) ಮತ್ತು (1ಎ) ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಅವುಗಳಲ್ಲಿ ಉಲ್ಲೇಖಿಸಲಾದ ಯಾವುದೇ ನೋಟೀಸಿನ ನೀಡಿಕೆ ಅಥವಾ ಪ್ರಕಟಣೆಯು ಶೀಘ್ರ ಮತ್ತು ಸ್ವಾಭಾವಿಕ ನಾಶಕ್ಕೆ ಒಳಪಡುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅವಶ್ಯಕವಾಗಿರತಕ್ಕದ್ದಲ್ಲ ಮತ್ತು ಎಸ್ಟೇಟ್ ಅಧಿಕಾರಿಯು ತಾನು ಸೂಕ್ತವೆಂದು ಯೋಚಿಸಬಹುದಾದಂಥ ಸಾಕ್ಷ್ಯವನ್ನು ದಾಖಲಿಸಿದ ತರುವಾಯ, ಅಂಥ ಸ್ವತ್ತನ್ನು ಮಾರಾಟ ಮಾಡಿಸಬಹುದು, ಅಥವಾ ತಾನು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಅದನ್ನು ವಿಲೇ ಮಾಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಮಾರಾಟ ಮಾಡಿರುವಲ್ಲಿ, ಅದರ ಮಾರಾಟದ ಹುಟ್ಟುವಳಿಯಲ್ಲಿ, ಮಾರಾಟದ ವೆಚ್ಚಗಳನ್ನು, ಮತ್ತು ಬಾಡಿಗೆಯ ಬಾಕಿಗಳ ಅಥವಾ ಹಾನಿ ಪರಿಹಾರಗಳ ಅಥವಾ ಖರ್ಚುಗಳ ಕಾರಣದಿಂದ ಕೇಂದ್ರ ಸರ್ಕಾರಕ್ಕೆ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಬರಬೇಕಾದ ಬಾಕಿ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಮುರಿದುಕೊಂಡು ಉಳಿದ ಮೊತ್ತವನ್ನು ಹಕ್ಕುದಾರರೆಂದು ಎಸ್ಟೇಟ್ ಅಧಿಕಾರಿಗೆ ಕಂಡುಬರಬಹುದಾದಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಅಂಥ ಬಾಕಿ ಮೊಬಲಗು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯವಾಗಬೇಕು ಎಂಬ ಬಗ್ಗೆ ಅಥವಾ ಅದರ ಹಂಚಿಕೆಯ ಬಗ್ಗೆ ನಿರ್ಧರಿಸಲು ಎಸ್ಟೇಟ್ ಅಧಿಕಾರಿಯು ಅಸಮರ್ಥನಾಗಿರುವಲ್ಲಿ, ಅವನು ಅಂತಹ ವಿವಾದವನ್ನು ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯಕ್ಕೆ ಒಪ್ಪಿಸಬಹುದು ಮತ್ತು ಆ ಬಗ್ಗೆ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2ಎ) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ "ಖರ್ಚುಗಳು" ಎಂಬ ಪದವು 5ಎ ಪ್ರಕರಣದ ಮೇರೆಗೆ ವಸೂಲಿ ಮಾಡಬಹುದಾದಂಥ ತೆಗೆದುಹಾಕುವ ಖರ್ಚನ್ನು ಮತ್ತು 5ಬಿ ಪ್ರಕರಣದ ಮೇರೆಗೆ ಕೆಡವಿ ಹಾಕುವ ಖರ್ಚುಗಳನ್ನು ಒಳಗೊಳ್ಳತಕ್ಕದ್ದು.

**7. ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ ಬಾಡಿಗೆಯನ್ನು ಅಥವಾ ಹಾನಿ ಪರಿಹಾರವನ್ನು ಸಂದಾಯ ಮಾಡುವಂತೆ ಅಗತ್ಯಪಡಿಸುವ ಅಧಿಕಾರ.**- (1) ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ ಯಾರೇ ವ್ಯಕ್ತಿಯು ಸಂದಾಯ ಮಾಡಬೇಕಾದ ಬಾಡಿಗೆಯು ಬಾಕಿ ಇರುವಲ್ಲಿ, ಎಸ್ಟೇಟ್ ಅಧಿಕಾರಿಯು, ಆದೇಶ ಹೊರಡಿಸಿ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗಾಗಿ ಮತ್ತು ಅಂಥ ಕಂತುಗಳಲ್ಲಿ, ಅದನ್ನು ಸಂದಾಯ ಮಾಡಲು ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2) ಯಾರೇ ವ್ಯಕ್ತಿಯು ಯಾವುದೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿ ಇರುವ ಅಥವಾ ಯಾವುದೇ ಕಾಲದಲ್ಲಿ ಇದ್ದ ಸಂದರ್ಭದಲ್ಲಿ, ಎಸ್ಟೇಟ್ ಅಧಿಕಾರಿಯು, ಅಂತಹ ಆವರಣಗಳ ಬಳಕೆಯ ಮತ್ತು ಅಧಿಭೋಗದ ನಿಮಿತ್ತ ಆಗಿರಬಹುದಾದ ಹಾನಿಯನ್ನು ನಿಯಮಿಸಬಹುದಾದಂಥ ಹಾನಿ ಪರಿಹಾರ ನಿರ್ಧರಣಾ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಬಹುದು ಮತ್ತು ಆದೇಶದ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಮತ್ತು ನಿರ್ದಿಷ್ಟಪಡಿಸಬಹುದಾದಷ್ಟು ಕಂತುಗಳಲ್ಲಿ ಹಾನಿಯನ್ನು ಸಂದಾಯ ಮಾಡುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2ಎ) ಎಸ್ಟೇಟ್ ಅಧಿಕಾರಿಯು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡುವಾಗ ಸಂದರ್ಭಾನುಸಾರ ಬಾಡಿಗೆಯ ಬಾಕಿಯನ್ನು ಅಥವಾ ಹಾನಿ ಪರಿಹಾರವನ್ನು 1978ರ ಬಡ್ಡಿ ಅಧಿನಿಯಮದ ವ್ಯಾಪ್ತಿಯಲ್ಲಿ ಬಡ್ಡಿಯ ಪ್ರಸ್ತುತ ದರವನ್ನು ಮೀರದಂತೆ ನಿಯಮಿಸಬಹುದಾದಂತಹ ದರದಲ್ಲಿ ಸರಳ ಬಡ್ಡಿಯೊಂದಿಗೆ ಸಂದಾಯ ಮಾಡಬೇಕೆಂದು ಅಥವಾ ತುಂಬಿ ಕೊಡಬೇಕೆಂದು ನಿರ್ದೇಶಿಸಬಹುದು.

(3) ಯಾರೇ ವ್ಯಕ್ತಿಯನ್ನು, ಅವನ ವಿರುದ್ಧ ಅಂಥ ಆದೇಶವನ್ನು ಯಾಕೆ ಮಾಡಬಾರದು ಎಂಬ ಬಗ್ಗೆ ಅವನಿಗೆ ಜಾರಿ ಮಾಡಿದ ಲಿಖಿತ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಕಾರಣವನ್ನು ತೋರಿಸುವಂತೆ ಅಗತ್ಯಪಡಿಸುವವರೆಗೆ ಮತ್ತು ಅವನ ಆಕ್ಷೇಪಣೆಗಳು ಏನಾದರೂ ಇದ್ದರೆ ಅವುಗಳನ್ನು ಮತ್ತು ಅವುಗಳ ಸಮರ್ಥನೆಯಲ್ಲಿ ಅವನು ಹಾಜರುಪಡಿಸಬಹುದಾದ ಸಾಕ್ಷ್ಯವು ಏನಾದರೂ ಇದ್ದರೆ ಅವನ್ನು ಹಾಜರುಪಡಿಸುವವರೆಗೆ, ಅಂಥ ವ್ಯಕ್ತಿಯ ವಿರುದ್ಧ (1)ನೆಯ ಉಪಪ್ರಕರಣದ ಅಥವಾ (2)ನೆಯ ಉಪಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**8. ಎಸ್ಟೇಟ್ ಅಧಿಕಾರಿಗಳ ಅಧಿಕಾರಗಳು.**- ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ, ದಂಡ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಎಸ್ಟೇಟ್ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಹೊಂದಿರತಕ್ಕದ್ದು, ಅವು ಯಾವುವೆಂದರೆ,-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳ ಶೋಧನೆ ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ನಿಯಮಿಸಬಹುದಾದಂತಹ ಇತರ ಯಾವುವೇ ವಿಷಯಗಳು.

**9. ಅಪೀಲುಗಳು.**- (1) 5ನೇ ಪ್ರಕರಣದ ಅಥವಾ 5ಬಿ ಪ್ರಕರಣದ ಅಥವಾ 5ಸಿ ಪ್ರಕರಣದ ಅಥವಾ 7ನೇ ಪ್ರಕರಣದ ಮೇರೆಗೆ ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ, ಎಸ್ಟೇಟ್ ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶದ ವಿರುದ್ಧ ಅಪೀಲು ಅಧಿಕಾರಿಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು, ಮತ್ತು ಅಂಥ ಅಪೀಲು ಅಧಿಕಾರಿಯು, ಆ ಸಾರ್ವಜನಿಕ ಆವರಣಗಳು ಯಾವ ಜಿಲ್ಲೆಯಲ್ಲಿ ಇವೆಯೋ ಆ ಜಿಲ್ಲೆಯ ಜಿಲ್ಲಾ ನ್ಯಾಯಧೀಶನಾಗಿರತಕ್ಕದ್ದು ಅಥವಾ ಆ ಜಿಲ್ಲೆಯಲ್ಲಿ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಮತ್ತು ಈ ಸಂಬಂಧದಲ್ಲಿ ಆ ಜಿಲ್ಲಾ ನ್ಯಾಯಾಧೀಶನು ಹೆಸರಿಸಿರುವ ಯಾರೇ ಇತರ ನ್ಯಾಯಿಕ ಅಧಿಕಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಅಪೀಲನ್ನು ಕೆಳಕಂಡ ರೀತಿಯಲ್ಲಿ ಸಲ್ಲಿಸತಕ್ಕದ್ದು:-

(ಎ) 5ನೇ ಪ್ರಕರಣದ ಮೇರೆಗಿನ ಆದೇಶದ ವಿರುದ್ಧ ಅಪೀಲಿನ ಸಂದರ್ಭದಲ್ಲಿ, ಆ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ ಹನ್ನೆರಡು ದಿವಸಗಳ ಒಳಗೆ;

(ಬಿ) 5ಬಿ ಪ್ರಕರಣದ ಅಥವಾ 7ನೇ ಪ್ರಕರಣದ ಮೇರೆಗಿನ ಆದೇಶದ ವಿರುದ್ಧದ ಅಪೀಲಿನ ಸಂದರ್ಭದಲ್ಲಿ, ಅಪೀಲುದಾರನಿಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ ಹನ್ನೆರಡು ದಿವಸಗಳ ಒಳಗೆ; ಮತ್ತು

(ಸಿ) 5ಸಿ ಪ್ರಕರಣದ ಮೇರೆಗಿನ ಆದೇಶದ ವಿರುದ್ಧದ ಅಪೀಲಿನ ಸಂದರ್ಭದಲ್ಲಿ, ಅಂತಹ ಆದೇಶದ ದಿನಾಂಕದಿಂದ ಹನ್ನೆರಡು ದಿವಸಗಳ ಒಳಗೆ:

ಪರಂತು, ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದಾಗಿ ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಧ್ಯವಾಗಲಿಲ್ಲವೆಂಬುದಾಗಿ ಅಪೀಲು ಅಧಿಕಾರಿಗೆ ಮನದಟ್ಟಾದರೆ, ಸದರಿ ಅವಧಿ ಮುಕ್ತಾಯವಾದ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು.

(3) ಎಸ್ಟೇಟ್ ಅಧಿಕಾರಿಯ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿದಾಗ, ಅಪೀಲು ಅಧಿಕಾರಿಯು ತಾನು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ಮತ್ತು ಅಂತಹ ಷರತ್ತುಗಳ ಮೇಲೆ ಆ ಆದೇಶದ ಜಾರಿಯನ್ನು ತಡೆಹಿಡಿಯಬಹುದು:

ಪರಂತು, 5ಬಿ ಪ್ರಕರಣದ ಮೇರೆಗೆ, ಯಾವುದೇ ಕಟ್ಟಡವನ್ನು ಅಥವಾ ಇತರ ನಿರ್ಮಾಣವನ್ನು ಅಥವಾ ಜೋಡಣೆಯನ್ನು ಕೆಡವಿ ಹಾಕುವ ಅಥವಾ ತೆಗೆದುಹಾಕುವ ಬಗ್ಗೆ, ಆದೇಶವನ್ನು ಮಾಡಿದ ದಿನಾಂಕದಂದು ಯಾವುದೇ ಅಂಥ ಕಟ್ಟಡದ ಅಥವಾ ಇತರ ನಿರ್ಮಿತಿಯ ಅಥವಾ ಇತರ ರಚನೆಯ ಅಥವಾ ಜೋಡಣೆಯ ನಿರ್ಮಾಣವು ಅಥವಾ ಇತರ ಯಾವುದೇ ಕಾಮಗಾರಿಯ ನಿರ್ವಹಣೆಯು ಪೂರ್ಣವಾಗದೇ ಇದ್ದಲ್ಲಿ, ಆ ಅಪೀಲು ಇತ್ಯರ್ಥವಾಗುವವರೆಗೆ, ಅಂಥ ನಿರ್ಮಾಣವನ್ನು ಅಥವಾ ಕಟ್ಟಡವನ್ನು ಅಥವಾ ಕಾಮಗಾರಿಯನ್ನು ಮುಂದುವರಿಸದೇ ಇರುವುದಕ್ಕೆ ಅಪೀಲು ಅಧಿಕಾರಿಯ ಅಭಿಪ್ರಾಯದಲ್ಲಿ ಸಾಕಷ್ಟು ಎನಿಸಬಹುದಾದಷ್ಟು ಭದ್ರತೆಯನ್ನು ಅಪೀಲುದಾರನು ನೀಡದ ಹೊರತು, ಅಪೀಲು ಅಧಿಕಾರಿಯು ಅಂತಹ ಆದೇಶದ ಜಾರಿಯನ್ನು ತಡೆಯುವ ಬಗ್ಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಅಪೀಲು ಅಧಿಕಾರಿಯು ಸಾಧ್ಯವಾದಷ್ಟು ಬೇಗನೆ ವಿಲೆ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗಿನ ಯಾವುದೇ ಅಪೀಲಿನ ಖರ್ಚುಗಳು ಅಪೀಲು ಅಧಿಕಾರಿಯ ವಿವೇಚನೆಗೊಳಪಟ್ಟಿರತಕ್ಕದ್ದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ, ಪ್ರೆಸಿಡೆನ್ಸಿ ಪಟ್ಟಣವನ್ನು ಒಂದು ಜಿಲ್ಲೆಯೆಂದು ಭಾವಿಸತಕ್ಕದ್ದು ಮತ್ತು ಅಲ್ಲಿರುವ ನಗರ ಸಿವಿಲ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನನ್ನು ಅಥವಾ ಪ್ರಧಾನ ನ್ಯಾಯಾಧೀಶನನ್ನು ಆ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರೆಂಬುದಾಗಿ ಭಾವಿಸತಕ್ಕದ್ದು.

**10. ಆದೇಶಗಳ ಅಂತಿಮತೆ.-** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಎಸ್ಟೇಟ್ ಅಧಿಕಾರಿಯು ಅಥವಾ ಅಪೀಲು ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಅಸಲು ದಾವೆಯಲ್ಲಿ, ಅರ್ಜಿಯಲ್ಲಿ ಅಥವಾ ಅಮಲ್ಜಾರಿ ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕನುಸಾರವಾಗಿ ಕೈಗೊಳ್ಳಲಾದ ಅಥವಾ ಕೈಗೊಳ್ಳಬೇಕಾಗಿರುವ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಅಥವಾ ಯಾವುದೇ ಪ್ರಾಧಿಕಾರವು ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**11. ಅಪರಾಧಗಳು ಮತ್ತು ದಂಡನೆ.-** (1) ಯಾರೇ ವ್ಯಕ್ತಿಯು, ಯಾವುವೇ ಸಾರ್ವಜನಿಕ ಆವರಣಗಳನ್ನು ಕಾನೂನುಬಾಹಿರವಾಗಿ ಅಧಿಭೋಗಿಸುತ್ತಿದ್ದರೆ, ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ

ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು, (ಮಂಜೂರಾತಿಯ ಹಂಚಿಕೆಯ ರೂಪದಲ್ಲಿ ಅಥವಾ ಇತರ ಯಾವುದೇ ರೀತಿಯಲ್ಲಿ) ಯಾವುದೇ ಪ್ರಾಧಿಕಾರದ ಕಾರಣದಿಂದಾಗಿ ಯಾವುವೇ ಸಾರ್ವಜನಿಕ ಆವರಣಗಳ ಕಾನೂನುಬದ್ಧ ಅಧಿಭೋಗದಲ್ಲಿದ್ದು ಅಂತಹ ಪ್ರಾಧಿಕಾರವು ಸಿಂಧುವಾಗಿರುವುದು ನಿಂತುಹೋದ ಮೇಲೂ, ಅಂತಹ ಆವರಣದ ಅಧಿಭೋಗವನ್ನು ಅವನು ಮುಂದುವರಿಸಿದ್ದರೆ ಅಂತಹ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಯಾವುವೇ ಸಾರ್ವಜನಿಕ ಆವರಣಗಳಿಂದ ಹೊರಹಾಕಲಾಗಿದ್ದ ಯಾರೇ ವ್ಯಕ್ತಿಯು, ಅಧಿಭೋಗಕ್ಕೆ ಪ್ರಾಧಿಕಾರವಿಲ್ಲದೆ ಆ ಆವರಣಗಳನ್ನು ಮತ್ತೆ ಅಧಿಭೋಗಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) (2)ನೆಯ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ಯಾರೇ ಮ್ಯಾಜಿಸ್ಟ್ರೇಟನು, ಆ ವ್ಯಕ್ತಿಯನ್ನು ಕ್ಷಿಪ್ರವಾಗಿ ಹೊರಹಾಕುವ ಬಗ್ಗೆ ಆದೇಶವನ್ನು ಮಾಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ಅವನ ವಿರುದ್ಧ ಕೈಗೊಳ್ಳಬಹುದಾದಂತಹ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಆ ವ್ಯಕ್ತಿಯು ಹಾಗೆ ಹೊರಹಾಕುವಿಕೆಗೆ ಬದ್ಧನಾಗಿರತಕ್ಕದ್ದು.

**11ಎ. 11ನೆಯ ಪ್ರಕರಣದ ಮೇರೆಗೆ ಅಪರಾಧಗಳು ಸಂಜ್ಞೇಯವಾಗಿರುವುದು.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ2) ಇದು 11ನೇ ಪ್ರಕರಣದ ಅಡಿಯಲ್ಲಿನ ಒಂದು ಅಪರಾಧವು ಸಂಜ್ಞೇಯ ಅಪರಾಧವಾಗಿದ್ದರೆ ಹೇಗೋ ಹಾಗೆ, ಕೆಳಕಂಡ ಉದ್ದೇಶಗಳಿಗಾಗಿ ಆ ಅಪರಾಧಕ್ಕೆ ಅನ್ವಯವಾಗತಕ್ಕದ್ದು, ಎಂದರೆ:-

(i) ಅಂತಹ ಅಪರಾಧದ ತನಿಖೆಯ ಉದ್ದೇಶಗಳು; ಮತ್ತು

(ii) ಈ ಮುಂದಿನವುಗಳಿಗೆ ಹೊರತಾದ ವಿಷಯಗಳ ಉದ್ದೇಶಗಳು, ಎಂದರೆ:-

(1) ಆ ಸಂಹಿತೆಯ 42ನೆಯ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳಿಗೆ ಹೊರತಾದ ವಿಷಯಗಳ ಉದ್ದೇಶಗಳು; ಮತ್ತು

(2) ಈ ಕೆಳಕಂಡವರು ಸಲ್ಲಿಸಿದ ದೂರಿನ ಮೇಲೆ ಅಥವಾ ಅವರಿಂದ ಪಡೆದ ಮಾಹಿತಿಯ ಮೇಲೆ ಹೊರತಾಗಿ ಒಬ್ಬ ವ್ಯಕ್ತಿಯ ದಸ್ತಗಿರಿ ಎಂದರೆ:-

(ಎ) (2)ನೇ ಪ್ರಕರಣದ (ಇ) ಖಂಡದ (1)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿರುವ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದ ಗ್ರೂಪ್ 'ಎ' ಅಧಿಕಾರಿ;

(ಬಿ) 2ನೇ ಪ್ರಕರಣದ (ಇ) ಖಂಡದ (2)ನೆಯ ಉಪಖಂಡದಲ್ಲಿ ನಿರ್ದಿಷ್ಟಪಡಿಸಿರುವ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಗ್ರೂಪ್ "ಎ" ಅಧಿಕಾರಿಯ ದರ್ಜೆಗೆ ಸಮಾನವಾದ ದರ್ಜೆಯ ಅಧಿಕಾರಿ ಅಥವಾ ಅಂತಹ ಸಮಾನ ದರ್ಜೆಯ ಅಧಿಕಾರಿಯನ್ನು ನಿರ್ದಿಷ್ಟಪಡಿಸಲು ಸಾಧ್ಯವಾಗದೇ ಇದ್ದಲ್ಲಿ, ಶಾಸನಬದ್ಧ ಪ್ರಾಧಿಕಾರವು ನೇಮಕ ಮಾಡಬಹುದಾದಂತಹ ಕಾರ್ಯನಿರ್ವಾಹಕ ಅಧಿಕಾರಿ;

(ಸಿ) ದೆಹಲಿಯ ಪೌರಸಭಾ ನಿಗಮಕ್ಕೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ದೆಹಲಿಯ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಾಧಿಕಾರಿಯು ನೇಮಕ ಮಾಡಬಹುದಾದಂತಹ ಡೆಪ್ಯೂಟಿ ಕಮೀಷನರು;

(ಡಿ) ನವದೆಹಲಿಯ ಪುರಸಭಾ ಸಮಿತಿಗೆ ಸೇರಿದ ಸಾರ್ವಜನಿಕ ಆವರಣಗಳ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ನವದೆಹಲಿಯ ಪುರಸಭಾ ಸಮಿತಿಯ ಕಾರ್ಯದರ್ಶಿ;

(ಇ) ಅಧಿಸೂಚಿತ ಪ್ರದೇಶ ಸಮಿತಿಗೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ಆ ಸಮಿತಿಯ ಕಾರ್ಯದರ್ಶಿ;

(ಎಫ್) ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಅಪರಾಧದ ಸಂದರ್ಭದಲ್ಲಿ, ದೆಹಲಿ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರನು ನೇಮಕ ಮಾಡಬಹುದಾದಂತಹ ನಿರ್ದೇಶಕ.

**12. ಮಾಹಿತಿಯನ್ನು ಪಡೆಯುವ ಅಧಿಕಾರ.**- ಯಾರೇ ವ್ಯಕ್ತಿಗಳು, ಯಾವುದೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವರೆಂದು ಎಸ್ಟೇಟ್ ಅಧಿಕಾರಿಗೆ ನಂಬಲು ಕಾರಣಗಳಿರುವಲ್ಲಿ, ಆ ಎಸ್ಟೇಟ್ ಅಧಿಕಾರಿಯು ಅಥವಾ ಅವನಿಂದ ಈ ಸಂಬಂಧದಲ್ಲಿ ಅಧಿಕೃತನಾದ ಯಾರೇ ಇತರ ಅಧಿಕಾರಿಯು ಸಾರ್ವಜನಿಕ ಆವರಣಗಳ ಅಧಿಭೋಗದಲ್ಲಿರುವ ವ್ಯಕ್ತಿಗಳ ಹೆಸರು ಮತ್ತು ಇತರ ವಿವರಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವಂತೆ ಆ ವ್ಯಕ್ತಿಗಳನ್ನು ಅಥವಾ ಇತರ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಕ್ತಿಯು ತನಗೆ ಗೊತ್ತಿರುವ ಮಾಹಿತಿಯನ್ನು ಒದಗಿಸಲು ಬದ್ಧನಾಗತಕ್ಕದ್ದು.

**13. ವಾರಸುದಾರರು ಮತ್ತು ಕಾನೂನುಸಮ್ಮತ ಪ್ರತಿನಿಧಿಗಳ ಹೊಣೆಗಾರಿಕೆ.**- (1) ಯಾವ ವ್ಯಕ್ತಿಯ ವಿರುದ್ಧ ಬಾಡಿಗೆಯ ಬಾಕಿ ನಿರ್ಧರಣೆ ಅಥವಾ ಪರಿಹಾರದ ನಿರ್ಧರಣೆ ಅಥವಾ ಅಂತಹ ಬಾಡಿಗೆಯ ಅಥವಾ ಹಾನಿ ಪರಿಹಾರದ ಬಾಕಿಯ ಮೇಲೆ ಬಡ್ಡಿಯ ರೂಪದಲ್ಲಿ ಸಂದಾಯವಾಗಬೇಕಾದ ಮೊಬಲಗಿನ ನಿರ್ಧರಣೆ ಇವುಗಳ ಬಗ್ಗೆ ಯಾವುದೇ ವ್ಯವಹರಣೆಯನ್ನು ಕೈಗೊಳ್ಳಬೇಕಾಗಿದೆಯೋ ಅಥವಾ ಕೈಗೊಳ್ಳಲಾಗಿದೆಯೋ ಆ ವ್ಯಕ್ತಿಯು, ವ್ಯವಹರಣೆಯನ್ನು ಕೈಗೊಳ್ಳುವ ಮುಂಚೆ ಅಥವಾ ಆ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಮೃತಪಟ್ಟರೆ, ಆ ವ್ಯವಹರಣೆಯನ್ನು ಆ ವ್ಯಕ್ತಿಯ ವಾರಸುದಾರರ ವಿರುದ್ಧ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ವಿರುದ್ಧ ತೆಗೆದುಕೊಳ್ಳಬಹುದು ಅಥವಾ ಸಂದರ್ಭಾನುಸಾರ ಮುಂದುವರೆಸಬಹುದು.

(1ಎ) 5ಎ ಪ್ರಕರಣದ (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಮೇರೆಗೆ, ಯಾವ ವ್ಯಕ್ತಿಯಿಂದ, ಯಾವುದೇ ಕಟ್ಟಡ ಅಥವಾ ಇತರ ರಚನೆಯನ್ನು ಅಥವಾ ಜೋಡಣೆಯನ್ನು ಅಥವಾ ಸಂದರ್ಭಾನುಸಾರ ಯಾವುದೇ ಸರಕುಗಳನ್ನು, ಜಾನುವಾರುಗಳನ್ನು ಅಥವಾ ಇತರ ಪ್ರಾಣಿಗಳನ್ನು ತೆಗೆದುಹಾಕುವ ಬಗೆಗಿನ ಯಾವುದೇ ಖರ್ಚನ್ನು ವಸೂಲು ಮಾಡಬೇಕಾಗಿದೆಯೋ ಅಥವಾ 5ಬಿ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಕೆಡವಿ ಹಾಕುವ ಬಗೆಗಿನ ಯಾವುದೇ ವೆಚ್ಚವನ್ನು ವಸೂಲಿ ಮಾಡಬೇಕಾಗಿದೆಯೋ, ಆ ಯಾರೇ ವ್ಯಕ್ತಿಯು ಅಂಥ ವೆಚ್ಚದ ವಸೂಲಾತಿಯ ಬಗ್ಗೆ ಯಾವುದೇ ವ್ಯವಹರಣೆಯನ್ನು ಕೈಗೊಳ್ಳುವುದಕ್ಕೆ ಮುಂಚೆ ಅಥವಾ ಆ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಮೃತಪಟ್ಟರೆ, ಆ ವ್ಯವಹರಣೆಯನ್ನು ಆತನ ವಾರಸುದಾರರ ಅಥವಾ ಕಾನೂನುಸಮ್ಮತ ಪ್ರತಿನಿಧಿಗಳ ವಿರುದ್ಧ ತೆಗೆದುಕೊಳ್ಳಬಹುದು ಅಥವಾ ಸಂದರ್ಭಾನುಸಾರ ಮುಂದುವರಿಸಬಹುದು.

(2) ಯಾರೇ ವ್ಯಕ್ತಿಯಿಂದ ಬಾಡಿಗೆಯ ಅಥವಾ ಹಾನಿ ಪರಿಹಾರದ ಅಥವಾ 5ಎ ಪ್ರಕರಣದಲ್ಲಿ ಉಲ್ಲೇಖಿಸಲಾದ ತೆಗೆದುಹಾಕುವ ಬಗೆಗಿನ ಖರ್ಚುಗಳ ಅಥವಾ 5ಬಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಕೆಡವಿಹಾಕುವ ಬಗೆಗಿನ ವೆಚ್ಚಗಳ ಅಥವಾ 7ನೇ ಪ್ರಕರಣದ (2ಎ) ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಬಡ್ಡಿಯ ಅಥವಾ ಯಾವುದೇ ಇತರ ಖರ್ಚಿನ ಬಾಕಿಗಳ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಬರಬೇಕಾದ ಯಾವುದೇ ಮೊಬಲಗನ್ನು, ಆ ವ್ಯಕ್ತಿಯ ಮರಣದ ತರುವಾಯ ಆತನ ವಾರಸುದಾರರು ಅಥವಾ ಕಾನೂನುಸಮ್ಮತ ಪ್ರತಿನಿಧಿಗಳು ಸಂದಾಯ ಮಾಡತಕ್ಕದ್ದು. ಆದರೆ, ಅವರ ಹೊಣೆಗಾರಿಕೆಯು ಮೃತನ ಆಸ್ತಿಯ ಪೈಕಿ ಅವರ ವಶದಲ್ಲಿರುವ ಆಸ್ತಿಯ ಮಟ್ಟಿಗೆ ಪರಿಮಿತವಾಗಿರತಕ್ಕದ್ದು.

**14. ಭೂಕಂದಾಯದ ಬಾಕಿಯಂತೆ ಬಾಡಿಗೆ, ಇತ್ಯಾದಿಗಳನ್ನು ವಸೂಲು ಮಾಡುವುದು.**- ಯಾರೇ ವ್ಯಕ್ತಿಯು, 5ಬಿ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಕೆಡವಿ ಹಾಕುವ ಬಗೆಗಿನ ವೆಚ್ಚವನ್ನು ಅಥವಾ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಾಡಿಗೆಯ ಅಥವಾ (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಹಾನಿ ಪರಿಹಾರದ ಬಾಕಿಗಳನ್ನು ಅಥವಾ ಆ ಪ್ರಕರಣದ (2ಎ) ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ಬಡ್ಡಿಯನ್ನು ಅಥವಾ 9ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಖರ್ಚುಗಳನ್ನು ಅಥವಾ ಅಂತಹ ಬಾಡಿಗೆ, ಹಾನಿ ಪರಿಹಾರ, ವೆಚ್ಚ, ಬಡ್ಡಿ ಅಥವಾ ಖರ್ಚು- ಇವುಗಳ ಯಾವುದೇ ಭಾಗವನ್ನು, ಅವುಗಳಿಗೆ ಸಂಬಂಧಪಟ್ಟ ಆದೇಶದಲ್ಲಿ, ಸಂದಾಯ ಮಾಡಲು ಯಾವುದೇ ಸಮಯವನ್ನು ನಿರ್ದಿಷ್ಟಪಡಿಸಿದ್ದು ಆ ಸಮಯದೊಳಗೆ ಸಂದಾಯ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ,

ಎಸ್ಟೇಟ್ ಅಧಿಕಾರಿಯು, ಬಾಕಿ ಇರುವ ಮೊಬಲಗಿಗೆ ಸಂಬಂಧಪಟ್ಟ ಒಂದು ಪ್ರಮಾಣಪತ್ರವನ್ನು ಕಲೆಕ್ಟರನಿಗೆ ನೀಡಬಹುದು ಮತ್ತು ಆ ಕಲೆಕ್ಟರನು ಅದನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

**15. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.-** ಯಾವುದೇ ನ್ಯಾಯಾಲಯವು ಈ ಕೆಳಕಂಡವುಗಳಿಗೆ ಸಂಬಂಧಪಟ್ಟಂತೆ, ಯಾವುದೇ ದಾವೆಯನ್ನು ಅಥವಾ ಯಾವುದೇ ವ್ಯವಹರಣೆಯನ್ನು ಸ್ವೀಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ, ಎಂದರೆ:-

(ಎ) ಯಾವುದೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವ ಯಾರೇ ವ್ಯಕ್ತಿಯನ್ನು ಹೊರಹಾಕುವುದು; ಅಥವಾ

(ಬಿ) 5ಎ ಪ್ರಕರಣದ ಮೇರೆಗೆ, ಯಾವುದೇ ಕಟ್ಟಡವನ್ನು, ರಚನೆಯನ್ನು ಅಥವಾ ಜೋಡಣೆಯನ್ನು ಅಥವಾ ಸರಕುಗಳನ್ನು, ಜಾನುವಾರುಗಳನ್ನು ಅಥವಾ ಇತರ ಪ್ರಾಣಿಗಳನ್ನು ಸ್ಥಳಾಂತರಿಸುವುದು; ಅಥವಾ

(ಸಿ) 5ಬಿ ಪ್ರಕರಣದ ಮೇರೆಗೆ ಯಾವುದೇ ಕಟ್ಟಡವನ್ನು ಅಥವಾ ಇತರ ರಚನೆಯನ್ನು ಕೆಡವಿ ಹಾಕುವುದು ಅಥವಾ ಕೆಡವಿ ಹಾಕಲು ಆದೇಶ ಮಾಡುವುದು; ಅಥವಾ

(ಸಿಸಿ) 5ಸಿ ಪ್ರಕರಣದ ಮೇರೆಗೆ ಯಾವುದೇ ನಿರ್ಮಿತಿಯನ್ನು ಅಥವಾ ಕಾಮಗಾರಿಯನ್ನು ಅಥವಾ ಯಾವುದೇ ಸಾರ್ವಜನಿಕ ಆವರಣಗಳನ್ನು ಸೀಲ್ ಮಾಡುವುದು; ಅಥವಾ

(ಡಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಾಡಿಗೆಯ ಬಾಕಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಹಾನಿ ಪರಿಹಾರ ಅಥವಾ ಆ ಪ್ರಕರಣದ (2ಎ) ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಡ್ಡಿ; ಅಥವಾ

(ಇ) ಈ ಕೆಳಕಂಡವುಗಳ ವಸೂಲಿ,-

(i) 5ಎ ಪ್ರಕರಣದ ಮೇರೆಗೆ ಯಾವುದೇ ಕಟ್ಟಡವನ್ನು, ರಚನೆಯನ್ನು ಅಥವಾ ಜೋಡಣೆಯನ್ನು ಅಥವಾ ಸರಕುಗಳನ್ನು ತೆಗೆದು ಹಾಕುವುದಕ್ಕೆ ಅಥವಾ ಜಾನುವಾರುಗಳನ್ನು ಅಥವಾ ಇತರ ಪ್ರಾಣಿಗಳನ್ನು ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದ ಖರ್ಚುಗಳು; ಅಥವಾ

(ii) 5ಬಿ ಪ್ರಕರಣದ ಮೇರೆಗೆ ಕೆಡವಿ ಹಾಕುವ ಬಗೆಗಿನ ವೆಚ್ಚಗಳು; ಅಥವಾ

(iii) 9ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾಗಿರುವ ಖರ್ಚುಗಳು; ಅಥವಾ

(iv) ಅಂತಹ ಬಾಡಿಗೆ, ಹಾನಿ ಪರಿಹಾರಗಳು, ತೆಗೆದುಹಾಕುವ ಖರ್ಚುಗಳು, ಕೆಡವಿಹಾಕುವ ವೆಚ್ಚಗಳು ಅಥವಾ ಕೇಂದ್ರ ಸರ್ಕಾರಕ್ಕೆ ಅಥವಾ ಶಾಸನಬದ್ಧ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಖರ್ಚುಗಳು ಇವುಗಳ ಯಾವುದೇ ಭಾಗ.

**16. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮಗಳ ಅಥವಾ ಆದೇಶಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಅಥವಾ ಶಾಸನಬದ್ಧ ಪ್ರಾಧಿಕಾರದ ಅಥವಾ ಅಪೀಲು ಅಧಿಕಾರಿಯ ಅಥವಾ ಎಸ್ಟೇಟ್ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**17. ಅಧಿಕಾರಗಳ ಪ್ರತ್ಯಾಯೋಜನೆ.-** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ, ಅದು ಚಲಾಯಿಸಬಹುದಾದಂತಹ ಯಾವುದೇ ಅಧಿಕಾರವನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರಬಹುದಾದಂತಹ ಷರತ್ತುಗಳೇನಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ಅಧಿಕಾರಿಯು ಸಹ ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

**18. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು; ಅವು ಯಾವುವೆಂದರೆ,-

(ಎ) ಈ ಅಧಿನಿಯಮದ ಮೇರೆಗೆ ಕೊಡಬೇಕಾದ ಅಥವಾ ಕೊಡಲು ಅಧಿಕೃತಗೊಳಿಸಲಾದ ಯಾವುವೇ ನೋಟೀಸಿನ ನಮೂನೆ ಮತ್ತು ಅದನ್ನು ಜಾರಿಗೊಳಿಸಬಹುದಾದಂಥ ರೀತಿ;

(ಬಿ) ಈ ಅಧಿನಿಯಮದ ಮೇರೆಗೆ ವಿಚಾರಣೆಗಳನ್ನು ನಡೆಸುವುದು;

(ಸಿ) ಎಸ್ಟೇಟ್ ಅಧಿಕಾರಿಗಳಿಗೆ ಕೆಲಸದ ವಿತರಣೆ ಮತ್ತು ಹಂಚಿಕೆ ಮತ್ತು ಒಬ್ಬ ಎಸ್ಟೇಟ್ ಅಧಿಕಾರಿಯ ಬಳಿ ಇತ್ಯರ್ಥದಲ್ಲಿರುವ ಯಾವುದೇ ವ್ಯವಹರಣೆಯನ್ನು ಮತ್ತೊಬ್ಬ ಎಸ್ಟೇಟ್ ಅಧಿಕಾರಿಗೆ ವರ್ಗಾವಣೆ ಮಾಡುವುದು;

(ಡಿ) ಸಾರ್ವಜನಿಕ ಆವರಣಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಲ್ಲಿ ಅನುಸರಿಸಬೇಕಾದ ವಿಧಾನ;

(ಇ) ಅನಧಿಕೃತ ಅಧಿಭೋಗಕ್ಕೆ ಸಂಬಂಧಿಸಿದ ಹಾನಿ ಪರಿಹಾರವನ್ನು ನಿರ್ಧರಿಸಬಹುದಾದ ರೀತಿ ಮತ್ತು ಅಂತಹ ಹಾನಿ ಪರಿಹಾರವನ್ನು ನಿರ್ಧರಿಸುವಾಗ ಗಣನೆಗೆ ತೆಗೆದುಕೊಳ್ಳಬೇಕಾದಂಥ ತತ್ವಗಳು;

(ಇಎ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಬಾಡಿಗೆ ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ಹಾನಿ ಪರಿಹಾರ-ಇವುಗಳ ಬಾಕಿಗಳ ಮೇಲೆ ಸಂದಾಯವಾಗತಕ್ಕ ಬಡ್ಡಿಯ ದರ;

(ಇಇ) 5ಸಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ನಿರ್ಮಿತಿಯನ್ನು ಅಥವಾ ಕಾಮಗಾರಿಯನ್ನು ಅಥವಾ ಯಾವುದೇ ಸಾರ್ವಜನಿಕ ಆವರಣಗಳನ್ನು ಸೀಲ್ ಮಾಡಬಹುದಾದ ರೀತಿ;

(ಎಫ್) ಅಪೀಲುಗಳನ್ನು ಸಲ್ಲಿಸಬಹುದಾದಂಥ ರೀತಿ ಮತ್ತು ಅಪೀಲುಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**19. ನಿರಸನ.-** ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1958 ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**20. ಸಿಂಧುಗೊಳಿಸುವಿಕೆ.-** ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶವೇನೇ ಇದ್ದರೂ, ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1958ರ (1958ರ 32)ರ (ಇನ್ನು ಮುಂದೆ ಈ ಪ್ರಕರಣದಲ್ಲಿ 1958ರ ಅಧಿನಿಯಮ ಎಂದು

ಉಲ್ಲೇಖಿಸಲಾಗಿದೆ) ಮೇರೆಗೆ ಮಾಡಲಾದ ನಿಯಮಗಳು ಮತ್ತು ಆದೇಶಗಳು, ಹೊರಡಿಸಲಾದ ನೋಟೀಸುಗಳು, ಆದೇಶಿಸಲಾದ ಅಥವಾ ಕಾರ್ಯಗತಗೊಳಿಸಲಾದ ಹೊರಹಾಕುವಿಕೆಗಳು, ನಿರ್ಧರಿಸಲಾದ ಹಾನಿ ಪರಿಹಾರಗಳು, ವಸೂಲಿ ಮಾಡಲಾದ ಬಾಡಿಗೆಗಳು ಅಥವಾ ಹಾನಿ ಪರಿಹಾರಗಳು ಅಥವಾ ಖರ್ಚುಗಳು ಮತ್ತು ಹೂಡಲಾದ ವ್ಯವಹರಣೆಗಳು-ಇವುಗಳೂ ಸೇರಿ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅಂಥ ಕಾರ್ಯವನ್ನು ಮಾಡಿದ್ದರೆ ಅಥವಾ ಕ್ರಮವನ್ನು ಕೈಗೊಂಡಿದ್ದರೆ ಹೇಗೋ ಹಾಗೆ ಸಿಂಧುವಾಗಿದೆಯೆಂದು ಮತ್ತು ಪರಿಣಾಮಕಾರಿಯಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮವು 1ನೆಯ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸೆಪ್ಟೆಂಬರ್, 1958ರ 16ನೆಯ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,-

(ಎ) 1958ರ ಅಧಿನಿಯಮವನ್ನು ಸಂವಿಧಾನಾತ್ಮಕವಲ್ಲದ್ದು ಮತ್ತು ಶೂನ್ಯವಾದದ್ದು ಎಂದು ಘೋಷಿಸಿರುವ ಕಾರಣಮಾತ್ರದಿಂದಲೇ ಸದರಿ ಅಧಿನಿಯಮದ ಮೇರೆಗೆ ವಸೂಲಿ ಮಾಡಲಾದ ಯಾವುದೇ ಬಾಡಿಗೆಯ ಅಥವಾ ಹಾನಿ ಪರಿಹಾರದ ಅಥವಾ ಖರ್ಚುಗಳ ಮರುಪಾವತಿಯನ್ನು ಕ್ಲೇಮು ಮಾಡಿರುವಲ್ಲಿ, ಅಂಥ ಮರುಪಾವತಿಯ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ ಅಥವಾ ಇತರ ಕಾನೂನು ವ್ಯವಹರಣೆಯನ್ನು ಮುಂದುವರಿಸತಕ್ಕದ್ದಲ್ಲ; ಮತ್ತು

(ಬಿ) 1958ನೇ ಇಸವಿಯ ಅಧಿನಿಯಮವನ್ನು ಸಂವಿಧಾನಾತ್ಮಕವಲ್ಲದ್ದು ಮತ್ತು ಶೂನ್ಯವಾದದ್ದು ಎಂದು ಘೋಷಿಸಿರುವ ಕಾರಣಮಾತ್ರದಿಂದಲೇ, ಸದರಿ ಅಧಿನಿಯಮದ ಮೇರೆಗೆ ವಸೂಲಿ ಮಾಡಲಾದ ಯಾವುದೇ ಬಾಡಿಗೆ ಅಥವಾ ಹಾನಿ ಪರಿಹಾರ ಅಥವಾ ಖರ್ಚನ್ನು ಮರುಪಾವತಿ ಮಾಡಲು ನಿರ್ದೇಶಿಸಿ ಯಾವುದೇ ನ್ಯಾಯಾಲಯವು ಯಾವುದೇ ಡಿಕ್ರಿಯನ್ನು ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

* * *